
# ಮರಾಠಿ ಕೈದಿಗಳ ಕವಿತೆಗಳು



ಜನಪ್ರಿಯ ಸಾಹಿತ್ಯಮಾಲೆ

# ಮರಾಠಿ ಕೈದಿಗಳ ಕವಿತೆಗಳು

ಸಂಪಾದಕ

**ಉತ್ತಮ ಕಾಂಬಳೆ**

ಅನುವಾದ

**ಡಿ.ಎಸ್. ಚೌಗಲೆ**

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಬೆಂಗಳೂರು

MARATI KAIDIGALA KAVITEGALU
A Collection of poems by Uttama Kambale

**Translated by**
**D.S. Chowgale**
Kannada Dept.
Bhaurao Kakatkar College Club Road,
Camp, BELGAUM - 590 001.

**Published by**
**N. Thippeswamy**
Administrative Officer
Kannada Book Authority
J.C. Road, Kannada Bavana
Bangalore-560 002

© Reserved

First Impression : 2004

Pages :xxxvi+52=88 **Price : Rs. 30/-**

ISBN: 81-7713-141-1

**D.T.P. by**
**JN Computer Graphics**
No.993, Ist Main, M.C. Layout
Vijayanagara, Bangalore - 40

*Cover Page Design:* Chandranath Acharya

**Printed by**
**Shakthi Printers & Publishers,**
No. 277, 5th Cross,
Vidhana Soudha Extn.,
Kavidhama Nagar, Laggere
Bangalore-560 058.
Phone : 080-22712264, 22712299

ರೈತ ಚಳುವಳಿ ನೆಲೆಯಲ್ಲಿ ಅರಳಿದ
ಬಹುಜನಸಮುದಾಯ ಕಾಳಜಿಯ
ಸರಳ - ಸಜ್ಜನಿಕೆಯ
ಆತ್ಮೀಯ ಮಿತ್ರ
**ಪರಶುರಾಮೇಗೌಡರ**
ನಿಷ್ಕಾಮ ಸ್ನೇಹಕ್ಕೆ

# ಅಕ್ಷರ ಸೂರ್ಯನಿಗೆ ನಮನ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
**ಅಧ್ಯಕ್ಷರು**

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್ ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದಲ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರೇ. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನು ಮಹತ್ವವನ್ನು ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೆ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು

ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ ಕನ್ನಡ ಪುಸ್ತಕ ಪ್ರಾಧಿಕಾರ ಎಂಬ ಮಾತಿಗೆ ಬೆಲೆ ಬರುತ್ತದೆ. ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. ಜ್ಞಾನದ ಬಲದಿಂದ ಅಜ್ಞಾನದ ಕೇಡು ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ಸಾಗಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನವ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲ! ಅನೇಕ ತಳವರ್ಗದ ಜನಸಮೂಹಗಳು ಮೊದಲಬಾರಿಗೆ ಅಕ್ಷರ ಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದವು. 1820ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದು ಹೋದ ಕಾಲವು ನಿರ್ವಾತವಾಗಿತ್ತೆಂದೂ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಆ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ!

ಮರಾಠಿ ಭಾಷೆಯಿಂದ ಕನ್ನಡಕ್ಕೆ ಹಲವು ಬಗೆಯ ಕೃತಿಗಳು ಬಂದಿವೆ. ಕಾದಂಬರಿ, ಕತೆ, ವಿಚಾರ ಸಾಹಿತ್ಯ ಈ ಪ್ರಕಾರಗಳ ಹಲವು ಕೃತಿಗಳು ಬಂದಿವೆ. ಇವು ಕನ್ನಡಿಗರ ವೈಚಾರಿಕ ಓದಿಗೆ ಒಳಗಾಗಿವೆ. ಆದರೆ ಮರಾಠಿ ಕವಿತೆಗಳು ಬರಬೇಕಾದಷ್ಟು ಪ್ರಮಾಣದಲ್ಲಿ ಬಂದಿಲ್ಲ. ನಾವು ಈ ಬಗೆಗೆ ಯೋಚಿಸುವುದು ಅಗತ್ಯವಿದೆ. ಮರಾಠಿಯ ಪ್ರಸಿದ್ಧ ದಲಿತ ಕವಿ ಉತ್ತಮ ಕಾಂಬಳೆ ಮಹಾರಾಷ್ಟ್ರದ ಜೈಲಿನಲ್ಲಿರುವ ಕೆಲ ಕೈದಿಗಳ ಕವಿತೆಗಳನ್ನು ಆಯ್ದು 'ಗಜಾಆಡಚ್ಯಾ ಕವಿತಾ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದರು. ಈ ಬಗೆಯ ಕವನ ಸಂಕಲನ ಮರಾಠಿಯಲ್ಲೇ ಹೊಸದು. ಈ ಸಂಕಲನದ ಕವಿತೆಗಳು ಹಲವು ಬಗೆಯ ವೈಚಾರಿಕ ಚಿಂತನೆಗಳನ್ನು ಮೂಡಿಸಿವೆ. ಕನ್ನಡ-ಮರಾಠಿ ಸಾಹಿತ್ಯದ ನಡುವಣ ವೈಚಾರಿಕ ಆಶಯಗಳನ್ನು ಚೆನ್ನಾಗಿ ತಿಳಿದಿರುವ ಡಿ.ಎಸ್. ಚೌಗಲೆ ಮರಾಠಿ ಕೈದಿಗಳ ಕವಿತೆಗಳು ಎಂಬ ಸಂಕಲನವನ್ನು ಇಲ್ಲಿ ಕೊಡ ಮಾಡಿದ್ದಾರೆ.

ಇಲ್ಲಿಯ ಕವಿತೆಗಳು ಸರಳುಗಳ ಹಿಂದೆ ಮಾತನಾಡಿವೆ. ಇಲ್ಲಿ ಮಾತನಾಡುವವರು ಬೇರೆ ಬೇರೆ ಕಾರಣಗಳಿಂದ ಕೈದಿಗಳಾಗಿರುವವರು. ಆದರೆ ಈ ಕೈದಿಗಳ ಮಾತಿನಲ್ಲಿ ಕವಿತೆಯ ರೂಪಕಗಳು ಅಡಗಿ ಕೂತಿವೆ. ಅವರ ಅನುಭವ, ನೋವು, ಹತಾಶೆ, ಹಿಂಸೆ, ಜೀವನಪ್ರೀತಿ ಮುಂತಾದವು ಅವರನ್ನು ಮನುಷ್ಯರನ್ನಾಗಿಸಿವೆ. ಇಲ್ಲಿಯ ಕವಿತೆಗಳಲ್ಲಿ ಇವು ಎದ್ದು ಕಾಣುತ್ತವೆ. ಈ ಬಗೆಯ ಆಶಯವಾಗಿರುವುದನ್ನು ನಾವು ಈ ಸಂಕಲನದ ಮೂಲಕ ತಿಳಿಯಬಹುದಾಗಿದೆ. ಸರಳುಗಳ ಹಿಂದಿನ ಕೈದಿಗಳು ಬಿಕ್ಕಿ ಬಿಕ್ಕಿ ಅಳುತ್ತಿದ್ದಾರೆ ನಿಜ. ಆದರೆ ಈ ಕವಿತೆಗಳ ಮೂಲಕ ಧೈರ್ಯ ತಾಳುವ ಕಾರ್ಯವೂ ಆಗಿವೆ.

ಕನ್ನಡ ಕವಿತೆಗೆ ಎಷ್ಟೋ ಹೊಸ ನೀರುಗಳು ಹರಿದು ಬಂದಿವೆ. ಈ ಸಂಕಲನದ ಮೂಲಕ ಆ ಬಗೆಯ ಹೊಸ ನೀರು ಹರಿದು ಬಂದಿದೆ. ಇದು ಸಾಧ್ಯವಾಗಿರುವುದು ಡಿ.ಎಸ್. ಚೌಗಲೆ ಅವರ ಕಾವ್ಯ ಪ್ರೀತಿಯಿಂದ. ಇಂಥ ಸಂಕಲನವೊಂದನ್ನು ರೂಪಿಸಿ, ಅನುವಾದಿಸಿಕೊಟ್ಟ ಚೌಗಲೆ ಅವರ ಸಾಹಿತ್ಯ ಪ್ರೀತಿಗೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಪ್ರಾಧಿಕಾರದ ಸದಸ್ಯ ಮಿತ್ರ ಸಹಕಾರ ಈ ಸಂಕಲನ ಹೊರ ಬರಲು ಕಾರಣವಾಗಿದೆ. ಅಂದವಾಗಿ ಡಿಟಿಪಿ ಮಾಡಿಕೊಟ್ಟ ಜೆ. ಎನ್. ಕಂಪ್ಯೂಟರ್ ಗ್ರಾಫಿಕ್ಸ್ ಅವರನ್ನು ಮುದ್ರಿಸಿಕೊಟ್ಟ ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್‌ನ ಮಾಲೀಕರನ್ನು ಓದುವ ನಿಮ್ಮನ್ನು ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳು.

ದಿನಾಂಕ: ೧೧-೦೬-೨೦೦೪

# ರಾ. ರಂ. ಬೋರಾಡೆಯವರ ಮಾತು

ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳಿಯ ಅಧ್ಯಕ್ಷಸ್ಥಾನ ವಹಿಸಿಕೊಂಡ ನಂತರ ಏನಾದರು ನವನವೀನ ಶೋಧಕಾರ್ಯದಲ್ಲಿ ತೊಡಗಬೇಕೆನ್ನುವ ನನ್ನ ಆಲೋಚನೆ ನಡೆದಿತ್ತು. ಆ ಯತ್ನದ ಫಲಶ್ರುತಿಯೆಂದರೆ ಮಂಡಳಿಯಿಂದ ಪ್ರಕಟಗೊಳ್ಳುತ್ತಿರುವ 'ಗಜಾ ಆಡಚ್ಯಾ ಕವಿತಾ ' ( ಸರಳುಗಳ ಮರೆಯ ಕವಿತೆಗಳು) ಎಂಬ ಕವನಸಂಕಲನ.

ಪ್ರಸಿದ್ಧ ದಲಿತ ಕವಿ ಉತ್ತಮ ಕಾಂಬಳೆಯವರು ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳಿಯ ಸದಸ್ಯರು. ಅವರೊಮ್ಮೆ ನನ್ನೊಂದಿಗೆ ಮಾತನಾಡುವಾಗ ಮಹಾರಾಷ್ಟ್ರದ ಜೈಲಿನಲ್ಲಿ ಕೆಲ ಕೈದಿಗಳು ಉತ್ಕೃಷ್ಟ ಕಾವ್ಯ ಸೃಷ್ಟಿಯಲ್ಲಿ ತೊಡಗಿರುವುದನ್ನು ಹೇಳಿ, ಆ ಕೈದಿ ಕವಿಗಳ ಕವನ ಸಂಕಲನವನ್ನು ಮಂಡಳಿ ಪ್ರಕಟಿಸಬೇಕೆಂಬ ಅಭಿಲಾಷೆ ವ್ಯಕ್ತ ಪಡಿಸಿದರು. ಒಂದು ವೇಳೆ ಆ ಕಾವ್ಯ ಪ್ರಕಟಣೆಗೆ ಯೋಗ್ಯವೆನಿಸಿದರೆ ಖಂಡಿತ ಕವನ ಸಂಕಲನ ತರೋಣ ಎಂದು ಆ ಕ್ಷಣಕ್ಕೆ ಅವರಿಗೆ ಭರವಸೆಕೊಟ್ಟೆ. ಈಗ ' ಗಜಾ ಆಡಚ್ಯಾ ಕವಿತಾ ' ಕವನ ಸಂಕಲನವನ್ನು ಮಂಡಳಿ ಪ್ರಕಟಿಸಿ ಆ ಭರವಸೆಯನ್ನು ಈಡೇರಿಸುತ್ತಿರುವುದು ನನಗೆ ವಿಶೇಷ ಆನಂದ ಉಂಟುಮಾಡಿದೆ.

*ಕಟ್ಟ, ಕರಿಗಲ್ಲಿನ*
*ಗೋಡೆಯಲ್ಲಿ ಹುದುಗಿಕೊಂಡ ಮನುಷ್ಯ*

*- ಹಿತೇಶ ಶಹಾ*

*ಕರುಳ ಬಳ್ಳಿ, ಸಂಬಂಧ ಎಲ್ಲವನ್ನೂ*
*ಇಲ್ಲಿಯೇ ಮರೆತು ಹೋಗುವುದು*
*ಕೇವಲ ಬರೀ ಕೇವಲ*
*ಬಾನನ್ನೇ ದಿಟ್ಟಿಸುವುದು*

*- ರಮೇಶ ಬಾಬುರಾವ ಖಾಡೆ*

ಈ ತರಹದ ಭೋಗವನ್ನು ದೈವವಾಗಿ ಪಡೆದ ಮನುಷ್ಯ,

*ಇಲ್ಲಿ ವಿದ್ರಾವಕ ಹೃದಯ*
*ಶೂನ್ಯ ದೃಷ್ಟಿ*
*ಮಿದು ಮನವು*
*ಆರ್ತ ಸ್ವರದ ಕರೆಗೆ ಹಸಿದಿದೆ.*

ಇಂಥ ಅವಸ್ಥೆ ಹೊಂದಿದ ಮನುಷ್ಯ,

*ನಿನ್ನೊಂದು ನಿರಾಕರಣೆಯಲಿ*
*ಆಯುಷ್ಯ ಉಧ್ವಸ್ತ ಗೊಳಿಸೋ ಸ್ಫೋಟಕವಿದೆ*
*ಈಗ ನಾನೊಬ್ಬ ಕೈದಿ*
*ಉಳಿದ ಬದುಕಿಗೆ ಜೈಲಿದೆ*

ಹೀಗೆ ತನ್ನ ಸರಳುಗಳ ಮರೆಯಲ್ಲಿಯ ಕಾರಣಗಳನ್ನು ಅತ್ಯಂತ ಪ್ರಾಮಾಣಿಕವಾಗಿ ನಮೂದಿಸುವ ಮನುಷ್ಯ ಇಷ್ಟೊಂದು ಶಕ್ತಿಯುತವಾದ, ಸಮರ್ಥವಾದ ಕವಿತೆ ರಚಿಸುತ್ತಾನೆಂಬ ಮಾತು ಅಚ್ಚರಿ ಮೂಡಿಸುತ್ತದೆ. ಅಲ್ಲಿ ಮನಸ್ಸು ಕೊಂದು ಬದುಕ ಬೇಕಾಗುತ್ತದೆ. ಅಲ್ಲಿ ಸಂವೇದನೆಗಳನ್ನು ಜೀವಂತವಾಗಿಡುವುದು, ಜತನವಾಗಿಸುವುದು ಅಸಾಧ್ಯದ ಮಾತು. ಆದರೆ ಈ ಕೈದಿ ಕವಿಗಳು ಸಂವೇದನೆಗಳನ್ನು ಎದೆಗೂಡಲ್ಲಿ ಬೆಚ್ಚಗೆ ಇರಿಸಿದ್ದಾರೆ. ಅರ್ಥಾತ್ ಈ ಸಂವೇದನೆಗಳನ್ನು ಅವರು ಯಾಕೆ ಜತನವಾಗಿಸಿದರು ಎಂಬ ಆಲೋಚನೆಯನ್ನು ಚಿಂತಿಸಬೇಕು. ಆ ಕಾರಣಗಳು ಸ್ಪಷ್ಟಗೊಳ್ಳಬೇಕು. ಆ ಕಾರಣಗಳು ಜೈಲಿನ ವಿಷಯಕ್ಕೆ ಸಂಬಂಧಿಸಿದ ಬದಲಾವಣೆಯ ಸಂಕಲ್ಪನೆಯ ಹಿನ್ನೆಲೆಯಲ್ಲಿ ಇರುವ ಸಾಧ್ಯತೆಯಿದೆ. ಈ ಕೈದಿಗಳು ಶರೀರದಿಂದ ಸರಳಿನ ಹಿಂದೆ ಇದ್ದಾರೆ, ಆದರೆ ಮನಸ್ಸಿನಿಂದ ಮುಕ್ತರಾಗಿದ್ದಾರೆ. ಕದಾಚಿತ್ ಅವರಿಗೆ ಅವರ ಸಂವೇದನೆಗಳನ್ನು ಬೆಳೆಸಿ ಉಳಿಸುವ ವಾತಾವರಣವನ್ನು ಅಲ್ಲಿ ಪ್ರಜ್ಞಾಪೂರ್ವಕವಾಗಿ ನಿರ್ಮಿಸಿ ಕೊಡುತ್ತಿರಬಹುದು. ಒಬ್ಬ ಜೈಲಾಧಿಕಾರಿ ಸರಳುಗಳ ಹಿಂದಿರುವ ಕೈದಿಗಳಿಗೆ ಒಂದು ನಾಟಕ ಕಲಿಸುತ್ತಾನೆ. ಅವರನ್ನು ಸರಳುಗಳಿಂದ ಹೊರಗೆ ತಂದು ನಾಟ್ಯ ಮಂದಿರದಲ್ಲಿ ಸಹೃದಯ ಪ್ರೇಕ್ಷಕರೆದುರು ನಾಟಕವಾಡಿಸುತ್ತಾನೆ. ಹೀಗಿರುವಾಗ ಕೈದಿಗಳ ಸಂವೇದನೆಯನ್ನು ಜೋಪಾನವಾಗಿಡುವ ಕಾರ್ಯ ಜೈಲಿನಲ್ಲಿ ನಡೆಯುವುದಿಲ್ಲ ಎಂದು ಹೇಳುವುದು ಹೇಗೆ ಸಾಧ್ಯ?

*ಇದೆಂಥ ಆಯುಷ್ಯವೆಂದರೆ,*
*ಅಸ್ಮಿತೆಯ ಮಾತೇ ಇಲ್ಲ*
*ಯಾರಮೇಲಾದರು ಸಿಟಿಕೊಳ್ಳಬೇಕೆಂದರೆ,*

ಅಂಥ ಸಂಗಾತಿಯೇ ಇಲ್ಲ
ಕಲಮು ಮಾಡಿದ ದೇಹದಿಂದ
ಅಂಕುರಗೊಳ್ಳುವ ಜೀವವಿಲ್ಲ
ಎಂದಾದರು ಕೈಯಾಡಿಸುವಂಥ,
ಭಾವಾವೇಶ ಈಗಿಲ್ಲ,
ಇಂಥ ಕೈಫಿಯತ್ತಿನ ಅನಾಥ ಗೆಳೆಯನೆ,
ಇದು ರುಜುವಾತು ಅಲ್ಲ
ಕತ್ತಲೆಯನು ಭೇದಿಸುವಂಥ
ಮಾತೀಗ ಇಲ್ಲವೇ ಇಲ್ಲ

ಹೀಗೆ ನಮ್ಮ ಕವಿಗಳನ್ನು ನಾಚಿಸುವಂತೆ ಅತ್ಯುತ್ತಮ ಕವಿತೆಗಳನ್ನು ಜೈಲಿನಲ್ಲಿರುವ ಶಿವಾಜಿ ಸಾಳುಂಕೆ ಬರೆಯುತ್ತಾರೆಂದಾಗ ನನ್ನ ಈ ಮೇಲಿನ ಅಭಿಪ್ರಾಯದ ಅನುಭವ ನಿಮಗಾಗದೆ ಇರದು.

ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳಿಗೆ ಮತ್ತು ಮರಾಠಿ ಕಾವ್ಯಪ್ರೇಮಿಗಳಿಗೆ 'ಗಜಾ ಆಡಬ್ಯಾ ಕವಿತಾ' ಲಭ್ಯವಾಗುವಂತೆ ಮಾಡಿದ ಕವಿ ಮಿತ್ರ ಉತ್ತಮ ಕಾಂಬಳೆಯವರು ಬಹುದೊಡ್ಡ ಐತಿಹಾಸಿಕ ಕಾರ್ಯ ಸಾಧಿಸಿದ್ದಾರೆ. ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳಿ ಮತ್ತು ಮರಾಠಿ ಓದುಗರು ಅವರಿಗೆ ಋಣಿಯಾಗಿದ್ದಾರೆ. ಹಾಗೆಯೇ ಸರಳುಗಳ ಹಿಂದಿನ ಜನರೂ ಕೂಡ ಅವರಿಗೆ ಕಾಯಂ ಸ್ವರೂಪದ ಋಣಿಗಳಾಗಿದ್ದಾರೆ.

ಸಹಜ ರಜೆ ಚೀಟಿ ಅವರಿಗೆ ನೀಡುತ್ತ ಕೇಳಿದೆ
ಯಾರ ಹೆಸರನ್ನು ಸದರಿ ಜಾಮೀನದಾರರೆಂದು ಬರೆದರು?
ಚೀಟಿ ತಗೊಂಡರು,
ಹೆಸರು ಓದಿದರು.... ವಿಷ್ಣು ವಾಮನ ಶಿರವಾಡಕರ
ಕಂಠ ಬಿಗಿಯಿತು
ಕಣ್ಣು ತೇವಗೊಂಡಿತು
ಎದೆಯೊಳಗಿನ ಬಿಕ್ಕನ್ನು ಅದುಮುತ್ತ
ಅವರಿಗೆ ತಾತ್ಯಾ ದೇವರ ಪಾದ ಸೇರಿದ್ದನ್ನು ಹೇಳಿದೆ
ಪಾಂಡುರಂಗ,
ಸಿದ್ಧಾರ್ಥ,
ಮೋಹನ

*ಸುದ್ದಿ ಕೇಳಿ ದಂಗಾದರು*
*ಕೈದಿಕೋಣೆ ಮೆಟ್ಟಿಲು ಮೇಲೆ ಕುಳಿತು*
*ಮೂವರು ಬಿಕ್ಕಿ ಬಿಕ್ಕಿ ಅತ್ತರು*

ಕವಿ ಉತ್ತಮ ಕಾಂಬಳೆಯವರು 'ಗಜಾ ಆಡಚ್ಯಾ ಕವಿತಾ' ಎಂಬ ಕವನ ಸಂಕಲನ ಸಂಪಾದಿಸಿ ಸರಳುಗಳ ಮರೆಯಲಿ ಬಿಕ್ಕಿ ಬಿಕ್ಕಿ ಅಳುವ ಕವಿಗಳ ಕಣ್ಣೀರು ಒರೆಸುವ ಕಾರ್ಯ ಮಾಡಿದ್ದಾರೆ.

ಮುಂಬಯಿ
30 ಜನವರಿ 2002

ರಾ. ರಂ. ಬೋರಾಡೆ
ಅಧ್ಯಕ್ಷರು
ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು
ಸಂಸ್ಕೃತಿ ಮಂಡಳಿ

## ಸರಳುಗಳ ಹಿಂದಿರುವ ಹೃದಯದಲ್ಲಿ ಇಣುಕಿದಾಗ

ಜೈಲೆಂದರೆ ಅಪರಾಧಿಗಳನ್ನು, ಕೈದಿಗಳನ್ನು ಬಂಧನದಲ್ಲಿಡುವ ಒಂದು ಕಲ್ಲಿನ ಕಟ್ಟಡ. ಕಠಿಣ ಶಿಕ್ಷೆ, ಸಶ್ರಮ ಜೈಲುವಾಸ, ಕೈಯಲ್ಲಿ ಬೇಡಿಗಳು ಮತ್ತು ಬರಾಕಿನಲ್ಲಿ ವಾಸ. ಇಂಥ ಎಷ್ಟೋ ವಿಷಯಗಳು ಈ ಇಮಾರತಿಯ ಅಂಗಾಂಗಳಲ್ಲಿ ಇವೆ. ಹೊರಜಗತ್ತಿಗೆ ಇಲ್ಲಿಯ ಕೆಲ ವಿಷಯಗಳ ಪರಿಚಯ ಮಾತ್ರ ಭಿನ್ನ ಭಿನ್ನ ರೂಪದಲ್ಲಾಗುತ್ತದೆ. ಕೆಲವರು ಅತ್ತ ಗಮನ ಹರಿಸುವುದಿಲ್ಲ. ಒಬ್ಬ ವ್ಯಕ್ತಿಗೆ ಒಮ್ಮೆ ಅವನ ಹಣೆಯ ಮೇಲೆ 'ಗುನ್ನೆಗಾರ' ಎಂಬ ಮುದ್ರೆ ಬಿತ್ತೆಂದರೆ ಅವನನ್ನು ನೋಡುವ ಸಮಾಜದ ದೃಷ್ಟಿಕೋನವೇ ಬದಲಾಗುತ್ತದೆ. ಯಾವತ್ತೂ ಅವನನ್ನು ಅಪರಾಧಿ ಎಂತಲೇ ತಿಳಿಯಲಾಗುತ್ತದೆ. ಮೂಲದಲ್ಲಿ ಯಾರೊಬ್ಬರೂ ಸಂಪೂರ್ಣ ಗುನ್ನೆಗಾರರಾಗಿರುವುದಿಲ್ಲ. ಒಳ್ಳೆಯ ಹಾಗೂ ಕೆಡುಕುತನದ ಮಿಶ್ರಣವನ್ನು ಒಬ್ಬ ವ್ಯಕ್ತಿಯಲ್ಲಿ ಕಂಡೇ ಕಾಣುತ್ತೇವೆ. ಮನುಷ್ಯನೊಳಗಿನ ಕೆಡುಕು ನಿಯಂತ್ರಣ ಮೀರಿದಾಗ ಆತ ಅಪರಾಧಿಯಾಗುತ್ತಾನೆ. ಇದರರ್ಥ ಅಂಥವನೊಳಗಿನ ಒಳ್ಳೆಯತನ ಮುಗಿದಿದೆ ಎಂದಲ್ಲ. ಈ ಒಳ್ಳೆಯತನವನ್ನು ಆತನು ಸ್ವತಃ ಜಾಗರಿಸಿಕೊಳ್ಳುತ್ತಾನೆ. ಕೆಲವು ಸಂದರ್ಭದಲ್ಲಿ ಸಮಾಜದ ಒಳ್ಳೆಯ ನಡವಳಿಕೆಯ ನೆರವಿಂದ ಅದನ್ನು ಎಚ್ಚರಗೊಳಿಸುತ್ತಿರುತ್ತಾನೆ. ಅಪರಾಧಿತನದ ಉದಾತ್ತೀಕರಣವನ್ನು ಯಾರೂ ಯಾವ ಕಾಲಕ್ಕೂ ಮಾಡುವಂತಹದಲ್ಲ. ಅಪರಾಧವು ಕೂಡ ಸಮಾಜದ ನಿರ್ಮಿತಿಯಾಗಿರುತ್ತದೆ. ಈ ಮಾತು ಸತ್ಯವಾದುದು. ಅಪರಾಧಿಯ ವಿಚಾರ ಎಷ್ಟು ಅಗತ್ಯವೆನ್ನಿಸುತ್ತದೆಯೋ ಅಷ್ಟೇ ಸ್ವಾಭಾವಿಕವಾಗಿಯೇ ಸಮಾಜದ ವಿಚಾರವೂ ತಪ್ಪಿಸಲು ಬಾರದ ಹಾಗಿರುತ್ತದೆ. ಒಂದು ಚೀನಿ ಕತೆಯಿದೆ; ಒಬ್ಬ ವ್ಯಾಪಾರಿಯ ಮನೆಯಲ್ಲಿ ಕಳುವು ಆಯಿತು. ಕಳವನ್ನು ಆತನ ಮನೆಗೆಲಸದವನೇ ಮಾಡಿದ್ದಾನೆಂದು ಖಾತ್ರಿಯಾಯಿತು. ಮಾಲೀಕ ಕೆಲಸದವನನ್ನು ಮಾಲುಸಹಿತ ಹಿಡಿದುಬಿಟ್ಟ ಮತ್ತು ಅವನನ್ನು ನ್ಯಾಯಾಧೀಶರ ಎದುರು ಕಟಕಟೆಯಲ್ಲಿ ತಂದು ನಿಲ್ಲಿಸಿದ. ಕೆಲಸದವ ತಪ್ಪು ಒಪ್ಪಿಕೊಂಡ. ನ್ಯಾಯಾಧೀಶರು ಎರಡೂ ಬಾಜೂ ಆಲಿಸಿ ಅರಿತು ತೀರ್ಪು ಹೇಳತೊಡಗಿದರು. ಅವರೆಂದರು, " ಗೆಳೆಯರೆ, ಫಿರ್ಯಾದಿಯ ಕೆಲಸದವನೇ ಕಳುವು ಮಾಡಿದ್ದಾನೆಂಬ ವಿಚಾರದಲ್ಲಿ ಎಳ್ಳಷ್ಟು ಸಂಶಯವಿಲ್ಲ. ಸಾಕ್ಷಿ, ಪುರಾವೆಗಳು ಅದನ್ನೇ ಹೇಳುತ್ತಿವೆ. ಸ್ವತಃ ಆರೋಪಿಯೂ ತಪ್ಪು ಒಪ್ಪಿಕೊಂಡಿದ್ದಾನೆ. ಎರಡೂ ಪಕ್ಷದವರ ವಿಚಾರಗಳ ಅಧ್ಯಯನ ಮಾಡಿ ನಾನು ಈ ನಿರ್ಣಯವನ್ನು

ಕೊಡುತ್ತಿದ್ದೇನೆ. ಫಿರ್ಯಾದಿ ಆದ ಮಾಲೀಕನನ್ನು ಆರು ತಿಂಗಳು ಜೈಲಿನಲ್ಲಿಡಬೇಕು ಮತ್ತು ಆರೋಪಿಯನ್ನು ಬಿಡುಗಡೆಗೊಳಿಸಬೇಕು". ಈ ವಿಚಿತ್ರ ತೀರ್ಪು ಕೇಳಿ ಯಾರಿಗೆತಾನೆ ಆಘಾತವಾಗಲಿಕ್ಕಿಲ್ಲ! ಫಿರ್ಯಾದಿಗೂ ಆಘಾತವಾಯಿತು. ಆತನೆಂದ, "ಮಹಾಸ್ವಾಮಿ, ತಾವು ದಯವಿಟ್ಟು, ತಮ್ಮ ತೀರ್ಪಿನ ಬಗ್ಗೆ ಇನ್ನೊಮ್ಮೆ ಆಲೋಚನೆ ಮಾಡಬೇಕು. ತಮಗೆ ಆರೋಪಿಗೆ ಶಿಕ್ಷೆ ನೀಡುವ ತೀರ್ಪು ನೀಡುವುದಿದೆ. ಆದರೆ ತಪ್ಪಿ ಫಿರ್ಯಾದಿಗೆ ಶಿಕ್ಷೆ ಎಂದು ಹೇಳಿರಬಹುದು. ಮಹಾಸ್ವಾಮಿ, ದಯೆ ಮತ್ತು ಅಂತಕರಣದಿಂದ ತಾವು ತಮ್ಮ ತೀರ್ಪನ್ನು ಗಮನಿಸಬೇಕು ಹಾಗೂ ತಪ್ಪನ್ನು ತಿದ್ದಿ ಸರಿಪಡಿಸಬೇಕು."

ನ್ಯಾಯಾಧೀಶರು ಬಹಳ ಗಂಭೀರವಾಗಿ ಹೇಳಿದರು. "ಇಲ್ಲ ಗೆಳೆಯ, ನಾನು ತೀರ್ಪು ನೀಡುವಾಗ ಯಾವುದೇ ತಪ್ಪನ್ನು ಮಾಡಿಲ್ಲ. ಶಬ್ದಗಳ ತಪ್ಪು ಬಳಕೆಯೂ ಆಗಿಲ್ಲ. ಕಳ್ಳನನ್ನು ಹಿಡಿದು ತಂದ ಫಿರ್ಯಾದಿಗೆ ನಾನು ಶಿಕ್ಷೆ ನೀಡಿದ್ದೇನೆ ಮತ್ತು ಆರೋಪಿಯನ್ನು ನಿರ್ದೋಷಿಯೆಂದು ಸಾರಿದ್ದೇನೆ. ನಾನು ತಪ್ಪು ಮಾಡಿಲ್ಲ. ಕೆಲಸದವ ತನ್ನೊಡೆಯನ ಮನೆಯಲ್ಲಿ ಕಳುವು ಮಾಡಿರುವುದು ಸ್ಪಷ್ಟವಾಗಿಯೇ ಇದೆ. ನನ್ನ ಅಭಿಪ್ರಾಯದಂತೆ ಒಬ್ಬ ಕಳ್ಳ ಹುಟ್ಟುವುದಕ್ಕೆ ಮಾಲೀಕ (ಸಮಾಜ ವ್ಯವಸ್ಥೆ) ಹೆಚ್ಚು ಜವಾಬುದಾರನಾಗಿದ್ದಾನೆ. ಅವನ ವ್ಯವಸ್ಥೆಯಿಂದ ಮತ್ತೆ ಕಳ್ಳ ಜನಿಸಬಾರದು ಎಂತಲೆ ನಾನು ಅವನಿಗೆ (ವ್ಯವಸ್ಥೆಗೆ) ಶಿಕ್ಷೆ ನೀಡಿದ್ದೇನೆ. ಕಳ್ಳನಿಗಿಂತ ಕಳ್ಳತನದ ಹುಟ್ಟಿಗೆ ಕಾರಣವಾಗುವ ವ್ಯವಸ್ಥೆ (ಪರಿಸ್ಥಿತಿ) ಹೆಚ್ಚು ಹೊಣೆಗಾರಿಕೆಯುಳ್ಳದ್ದಾಗಿದೆ. ನನ್ನ ತೀರ್ಪು ಸರಿಯಾಗಿಯೇ ಇದೆ."

ನಾವು ಕೈದಿಗಳ ಮತ್ತು ಅವರಲ್ಲಿಯ ಗುನ್ಹೆಗಾರನ ಕುರಿತು ಯಾವಾಗ ವಿಚಾರ ಮಾಡುತ್ತೇವೆಯೋ ಆಗ ಮೂಲದ ಬಗ್ಗೆ ಚಿಂತಿಸುವುದಿಲ್ಲ. ಚಿಂತಿಸಿದರೂ ಅದನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ದೃಶ್ಯ ಸ್ವರೂಪದ ಬಗ್ಗೆ ಹೆಚ್ಚು ಆಲೋಚಿಸುತ್ತೇವೆ. ಜೈಲಿಗೆ ಹೋಗಿ ಕೈದಿಗಳನ್ನು ಕಂಡರೆ ಅಲ್ಲಿ ಅವರ ಭಿನ್ನ ವಿಭಿನ್ನ ಪದರುಗಳು ಕಾಣಸಿಗುತ್ತವೆ. ಪ್ರತಿಯೊಬ್ಬ ಕೈದಿಯ ಆಯುಷ್ಯವೆಂದರೆ ಕತೆ, ಕವಿತೆ, ಕಾದಂಬರಿಯೇ ಆಗಿರುತ್ತದೆ. ಜೈಲಿನೊಳಗಿದ್ದು, ಶಿಕ್ಷೆಯನ್ನು ಭೋಗಿಸುತ್ತ ಇರುವಾಗಲೂ ಅನೇಕ ಕೈದಿಗಳು ತಮ್ಮ ಭಾವಜಗತ್ತನ್ನು ಜತನವಾಗಿಡುವ ಪ್ರಯತ್ನ ಮಾಡುತ್ತಿರುತ್ತಾರೆ. ನಾವು ಯಾಕೆ ಅಪರಾಧಿಗಳಾದೆವು ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವುದನ್ನು ಮಾಡುತ್ತಿರುತ್ತಾರೆ. ತಮ್ಮ ಮನಸಾಕ್ಷಿಯನ್ನು ಮತ್ತೆ ಮತ್ತೆ ಕೆದಕಿ ಈ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾರೆ. ಪ್ರಶ್ನೆ ಕೇಳುತ್ತಲೇ ಅವರು ತಮ್ಮ ಭೂತಕಾಲವನ್ನು ಅಗೆಯಲು ಆರಂಭಿಸುತ್ತಾರೆ. ಅಗೆಯುತ್ತ ಅಗೆಯುತ್ತ ತಮ್ಮ ಪೂರ್ವಾಶ್ರಮದ ಬದುಕಿಗೆ ಬಂದು ತಲುಪುತ್ತಾರೆ. ಎಂಥ ಬದುಕಿನೆದುರು ಬಂದು ನಿಂತಿದ್ದಾರೆಂದರೆ, ಅಲ್ಲಿ ಅವರೆದುರು ಸರಳುಗಳ ಪಂಜರವಿರುವುದಿಲ್ಲ, ಕೈಯಲ್ಲಿ ಬೇಡಿಗಳಿಲ್ಲ. ಅವರನ್ನು ಕಾವಲು ಕಾಯುವ ಯಾವ ಸಿಪಾಯಿಯೂ ಇರುವುದಿಲ್ಲ. ಸಿಟ್ಟಿಂದ ಕೆಂಗಣ್ಣು ತೋರುವ ವಾರ್ಡನ್‌ನೂ ಅಲ್ಲಿರುವುದಿಲ್ಲ. ಅವರೆದೆಯ ಮೇಲೆ ಯಾವುದೇ

ನಂಬರಿನ ಲೇಬಲ್ಲೂ ಇರುವುದಿಲ್ಲ, ಅಥವಾ ಕೈದಿಗಳ ಸಮವಸ್ತ್ರ ಅವರು ತೊಟ್ಟಿರುವುದೇ ಇಲ್ಲ. ಆತ ಮತ್ತೆ ಮತ್ತೆ ಅಗೆಯುತ್ತಲೇ ಇರುತ್ತಾನೆ. ಆ ಬಳಿಕ ಈ ಅಗೆತದ ಕಾಯಕದಲ್ಲಿ ಆತ ತಾನೊಬ್ಬ ಮನುಷ್ಯ ಜೀವಿ ಎಂದು ಅರಿಯಲು ಯತ್ನಿಸುತ್ತಾನೆ. ತನ್ನದೇ ಭಾವ-ಭಾವನೆಗಳ ಕುರಿತು ಯೋಚಿಸುತ್ತಾನೆ. ಮನುಷ್ಯರಿಂದ ತುಂಬಿದ ಸಮಾಜದ ಮತ್ತು ಅವರೊಳಗಿನ ವಿಕಾರಗಳ ಬಗ್ಗೆ ಚಿಂತನೆಗೆ ಚಾಲನೆ ನೀಡುತ್ತಾನೆ. ಇದರಲ್ಲಿ ಗಾಢವಾಗಿ ಮುಳುಗಿದ ಆತ ಒಮ್ಮೆ ದೈವವನ್ನು ಇನ್ನೊಮ್ಮೆ ಪರಿಸ್ಥಿತಿಯನ್ನು ಸಾಕ್ಷಿಯಾಗಿಸುತ್ತಾನೆ. ಯಾವುದೋ ಒಂದು ಅಮಲು ಇಲ್ಲವೆ ಘಟನೆಯಲ್ಲಿ ಅರಿತೋ-ಅರಿಯದೆನೋ ಎಸಗಿದ ಅಪರಾಧದ ಕುರಿತೂ ಆಲೋಚಿಸುತ್ತಾನೆ. ಈ ಎಲ್ಲ ಪ್ರಶ್ನೆಗಳಿಗೂ ಆತನ ಬಳಿ ಉತ್ತರವಿರುವುದಿಲ್ಲ. ಕೆಲ ಜವಾಬುಗಳು ಉಕ್ಕಿನ ಕವಚ ಭೇದಿಸಿ ಹೊರಬರುವುದೇ ಇಲ್ಲ. ಇನ್ನು ಕೆಲವು ಹುಡುಕುವ ಬಳ್ಳಿ ಕಾಲಿಗೆ ಸುತ್ತಿದಂತೆ ಸುತ್ತಿಕೊಂಡು ಬಿಡುತ್ತವೆ. ಈ ಸಾಮಾಜಿಕ ವ್ಯವಸ್ಥೆಯ ಮೇಲೆ ಕೆಲ ಉತ್ತರಗಳು ಚಾರುಕೋಲು ಬೀಸಿದರೆ, ಕೆಲವು ಕಲ್ಪನೆಯ ದೈವಕ್ಕೆ ಹಿಡಿಶಾಪ ಹಾಕುತ್ತವೆ. ಕೆಲ ಜವಾಬುಗಳು ಹೀಗಿರುತ್ತವಲ್ಲ: ಆತನನ್ನು ಪೂರ್ವಜನ್ಮ, ಪುನರ್ ಜನ್ಮದ ವರೆಗಿನ ಕಲ್ಪನೆಯ ತನಕ ಕೊಂಡೊಯ್ದು ಬಿಡುತ್ತವೆ. ಕೈದಿ ಭೂತದಲ್ಲೇ ಸಿಲುಕುವುದಿಲ್ಲ, ಭವಿಷ್ಯತ್ತಿನ ವಿಷಯದಲ್ಲೂ ಕನಸು ಕಾಣತೊಡಗುತ್ತಾನೆ. ಆ ಗಳಿಗೆಯ ಚಿತ್ರಗಳು ಕ್ಷಣಕ್ಷಣಕ್ಕೆ ಅವನ ಮನದಲ್ಲಿ ನಿರ್ಮಾಣಗೊಳ್ಳುತ್ತವೆ. ಆತ ದೈಹಿಕವಾಗಿ ಜೈಲಿನಲ್ಲಿದ್ದರೆ, ಮಾನಸಿಕವಾಗಿ ಜೈಲಿನ ಹೊರಗಿರುತ್ತಾನೆ. ಅವನ ಭಾವನೆಗಳ ಇವೆಲ್ಲ ನವಿರಾದ ಸ್ಪಂದನಗಳು ಶಬ್ದಗಳ ರೂಪತೊಟ್ಟು ಇಲ್ಲಿ ಕಾವ್ಯವಾಗಿ ಹೊರಹೊಮ್ಮಿವೆ. ಬರಾಕಿನೊಳಗಿನ ಕ್ರೂರ ಹಾಗೂ ಭಯಂಕರ ಆದರೂ ಪ್ರಶಾಂತ ವಾತಾವರಣದೊಳಗೆ ಆತ ನಿತ್ಯ ಸಾವಿರಾರು ಪ್ರಶ್ನೆಗಳ ಹುಟ್ಟಿಗೆ ಕಾರಣನಾಗುತ್ತಾನೆ. ಆ ನೂರು, ಸಾವಿರ, ಲಕ್ಷಾನುಲಕ್ಷ ಪ್ರಶ್ನೆಗಳಿಗೆ ಉತ್ತರ ಹುಡುಕುವ ಯತ್ನ ಮಾಡುತ್ತಾನೆ. ಪ್ರಶ್ನೆ ಮತ್ತು ಉತ್ತರಗಳ ದಣಿವಿಲ್ಲದ ಆಟ ಆಡುವುದಕ್ಕಾಗಿ ಆತ ಕವಿತೆಯನ್ನು ಮಾಧ್ಯಮವಾಗಿ ಬಳಸಿಕೊಳ್ಳುತ್ತಾನೆ.

ಕವಿತೆ ಮನುಷ್ಯನ ನಿಷ್ಠಾವಂತ ಜತೆಗಾರನೆಂಬ ಮಾತಿದೆ. ಕಾವ್ಯ ಪ್ರಕಾರದೊಳಗೆ ಕೈದಿ ತನ್ನ ಭಾವನೆಗಳನ್ನು ಅಭಿವ್ಯಕ್ತಿಸಲು ಪ್ರಯತ್ನಿಸುತ್ತಾನೆ. ಎಲ್ಲ ಬಗೆಯ ಭಾವನೆಗಳು ಅವನ ಕವಿತೆಗಳಲ್ಲಿ ನಿಚ್ಚಳಗೊಂಡಿವೆ. ಪ್ರೀತಿ, ವಿರಹ, ಕುಟುಂಬ, ಸಮಾಜ, ದೇವರು, ದಾನವ, ದೇಶ , ಪರದೇಶ, ಧರ್ಮ ಮುಂತಾದವುಗಳೆಲ್ಲದರ ದರ್ಶನ ಮಾಡಿಸಲು ಆತ ಕಾವ್ಯಕನ್ನಿಕೆಯ ಜತೆ ಗೆಳೆತನ ಮಾಡುತ್ತಾನೆ. ಕವಿತೆಯೆಂದರೆ ಆತನ ಸ್ವಗತದ ಬಿಸಿಉಸಿರಾಗಿದೆ ! ಅದರ ಶಬ್ದ ಶಬ್ದಗಳಲ್ಲಿ ತನ್ನ ಬದುಕಿನ ಚದುರಂಗದ ಚಿತ್ರ ತುಂಬುವ ಪ್ರಯತ್ನ ಮಾಡುತ್ತಾನೆ. ಆತನ ಕವಿತೆ ಒರಟು - ಒರಟಾಗಿದೆ. ಅದರ ಮೇಲೆ ಸಂಸ್ಕಾರ ನೀಡುವ, ಅರಳಿಸುವ, ಮೆಲ್ಲಗೆ ನೇವರಿಸುವ ಮತ್ತು ಆಗಸಕ್ಕೆ ನೆಗೆಯಲು ಹುರುದುಂಬಿಸುವ ವ್ಯವಸ್ಥೆ ಜೈಲಿನಲ್ಲಿ ವಿರಳವಾಗಿರುತ್ತದೆ. ಕೆಲವು ಕೈದಿಗಳು ತಮ್ಮ ಲೇಖನಗಳು ದಿನಪತ್ರಿಕೆ

ಮತ್ತು ಬೇರೆ ಮ್ಯಾಗಜಿನ್‌ಗಳಲ್ಲಿ ಪ್ರಕಟಗೊಳ್ಳಲೆಂದು ಇಚ್ಛೆಪಟ್ಟು ಕಳಿಸುತ್ತಿರುತ್ತಾರೆ. ಇದು ಎಲ್ಲರಿಂದ ಸಾಧ್ಯವಾಗುವುದಿಲ್ಲ. ಹೀಗಾಗಿ ಬಹುತೇಕ ಕೈದಿಗಳ ಕವಿತೆ ಒರಟಾಗಿರುತ್ತದೆ. ಸಾಕಷ್ಟು ಸಂದರ್ಭದಲ್ಲಿ ಕವಿತೆ ಸುಂದರವಾಗಿ ಅನಿಸುವುದೇ ಇಲ್ಲ. ಆದರೆ, ಸರಳತನಕ್ಕೂ ಅದ್ಭುತವಾದ ಸೌಂದರ್ಯವಿರುತ್ತದೆ. ಸೌಂದರ್ಯದ ಜತೆ ಶಕ್ತಿಯೂ ಒಂದಾಗಿರುತ್ತದೆಂದು ಹೇಳುತ್ತಾರೆ. ಇದನ್ನು ಒರೆಗೆ ಹಚ್ಚಿದರೆ ಕೈದಿಗಳ ಕವಿತೆಗಳು ಸರಳವಾಗಿವೆ ಎಂಬುದು ನಿಜವಾದರೂ ಅವುಗಳಲ್ಲಿ ಆಶಯದ ತಾಕತ್ತು ಮಾತ್ರ ಜಬರದಸ್ತಾಗಿದೆ. ಅವರ ಕಾವ್ಯದೊಳಗೆ ಉದ್ಭವಗೊಂಡ ಪ್ರಶ್ನೆಗಳಿಗೆ ಉತ್ತರಿಸಲು ಹೊರಟಾಗ ಉಸುರುಗಟ್ಟುವ ಸ್ಥಿತಿ ಕೆಲ ಸಂದರ್ಭದಲ್ಲಿ ನಿರ್ಮಾಣವಾಗುತ್ತದೆ. ಸರಳತನ ಮನವನ್ನು ಘಾಸಿಗೊಳಿಸಿಬಿಡುತ್ತದೆ. ಕವಿತೆಗಳನ್ನು ಓದುವಾಗ ಮನುಷ್ಯ ಅಸ್ವಸ್ಥನಾಗುವುದಷ್ಟೆ ಅಲ್ಲ, ಆ ಅಸ್ವಸ್ಥತೆಯೊಳಗಿಂದ ಸಮಾಜ ವ್ಯವಸ್ಥೆಯನ್ನು ದೂಷಿಸುವ ಆಲೋಚನೆಯೂ ಅವನ ಮನಸ್ಸನ್ನು ತಟ್ಟಿ ಹೋಗುತ್ತದೆ. ಸಮಾಜದೊಳಗೆ ಅಧಿಕವಾಗುತ್ತಿರುವ ವಿಕಾರದ ಕಡೆಗೂ ಆತ ದೃಷ್ಟಿ ಹೊರಳಿಸುವ ಪ್ರಯತ್ನ ಮಾಡುತ್ತಾನೆ. ಕೈದಿ ಮತ್ತು ಸಮಾಜದೊಳಗಿನ ನಾಗರಿಕರ ನಡುವಿನ ಅಂತರವನ್ನು ಕಿರಿದುಗೊಳಿಸುವ ಶಕ್ತಿಯೂ ಈ ಕವಿತೆಗಳಲ್ಲಿದೆ. ಸಮಾಜವು ಆತ್ಮವಿಮರ್ಶೆ ಮಾಡಿಕೊಳ್ಳುವ ಅನಿವಾರ್ಯತೆ ಸಾಧ್ಯವಾಗುವಂತೆ ಈ ಕವಿತೆಗಳು ಸಹಜವಾಗಿ ಪರಿಣಾಮ ಬೀರುತ್ತವೆ.

ಜೈಲೆಂದರೆ ಅಪರಾಧಿಗಳು ಶಿಕ್ಷೆ ಅನುಭವಿಸುವ ಒಂದು ವಿಲಕ್ಷಣ ಜಗತ್ತು. ಕೈದಿ ಮೊಟ್ಟಮೊದಲು ಜೈಲು ಪ್ರವೇಶಿಸಿದಾಗ ಅಲ್ಲಿಯ ಶಿಸ್ತು, ಅದರಿಂದ ಹುಟ್ಟುವ ಭಯ, ಕಲ್ಲುಗೋಡೆ, ಸಶಸ್ತ್ರ ಸಿಪಾಯಿ ಇದೆಲ್ಲವೂ ಹೊಸದೆನಿಸುತ್ತದೆ. ಇಂಥ ಭಯಂಕರ, ನಿಸ್ಸತ್ವ ಮತ್ತು ಆತಂಕ ಹುಟ್ಟಿಸುವ ಪರಿಸರದಲ್ಲಿ ಆತನಿಗೆ ಶಿಕ್ಷೆಯ ದಿನಗಳನ್ನು ಕಳೆಯಬೇಕಾಗಿರುತ್ತದೆ. ಇದರ ಮೇಲೆ ಬೆಳಕು ಚೆಲ್ಲುವ ಫಿಲೀಪ್ ಭೀಮರಾವ ಶಿರಸಾಠ ಎಂಬ ಕೈದಿಕವಿ ಅನ್ನುತ್ತಾನೆ :

*ಇಲ್ಲಿ,*
*ಉಸುರುಗಟ್ಟಿದ ಮಾನಸಿಕತೆ*
*ಭಾವನೆಗಳ ದಾಹ*
*ಕಳಕೊಂಡ ಸಂಕಲ್ಪ*
*ನಿಜ ಅಸ್ತಿತ್ವವನ್ನು ಹುಡುಕುತ್ತಿದೆ.*

ಜೈಲಿನಲ್ಲಿ ಎಂಥೆಂಥ ಘಟಾನುಘಟಿಗಳದ್ದೂ ಹೇಗೆ ಉಸುರುಗಟ್ಟುತ್ತದೆ ಎಂಬುದಕ್ಕೆ ಸಾಕಷ್ಟು ಬರವಣಿಗೆ ನೋಡಲು ಸಿಗುತ್ತದೆ. ನಿಜವಾಗಿಯೂ ಹಾಗೆ ನೋಡಿದರೆ ಉಸಿರುಗಟ್ಟುವುದಕ್ಕೆಂದೆ ಜೈಲಿದೆ ಎಂಬ ವಿಚಾರದಲ್ಲಿ ತಿಳುವಳಿಕೆ ಮತ್ತು ತಪ್ಪು ಗ್ರಹಿಕೆಗಳು

ಇಂದಿಗೂ ಇವೆ. ಆದರೆ ಈ ವಾತಾವರಣದೊಳಗಿಂದ ಮನದ ಹಕ್ಕಿ ಮಾತ್ರ ಹಾರುವ, ರೆಕ್ಕೆ ಬಡಿಯುವ ಪ್ರಯತ್ನವನ್ನಂತೂ ಮಾಡುತ್ತಲೇ ಇರುತ್ತದೆ. ಅರ್ಥಾತ್ ಈ ರೆಕ್ಕೆಯ ಬಡಿದಾಟ, ಈ ವಿಹಾರವು ಕವಿತೆಗೆ ಮಾತ್ರ ಸೀಮಿತಗೊಂಡಿರುತ್ತದೆ. ಯಾಕೆಂದರೆ ವಾಸ್ತವದಲ್ಲಿ ಎದುರಿಗೆ ಇರುವುದು ಕಪ್ಪು ಸರಳುಗಳು. ಆ ಸರಳುಗಳಿಂದ ದೇಹ ಹೊರ ಹೋಗುವುದಿಲ್ಲ, ಆದರೆ ಮನಸ್ಸಿನ ನಾಗಾಲೋಟವನ್ನು ತಡೆಯುವವರು ಯಾರು ? ಅದಂತೂ ಬುರ್ರನೆ ಹಾರಿ ಹೋಗುತ್ತದೆ. ಕೈದಿಗಳ ಊರಿಗೆ, ಮನೆಗೆ, ಕುಟುಂಬ ಎಲ್ಲಿದೆ ಅಲ್ಲಿ ಕೂಡ. ಬಹುಜನ ಕೈದಿಗಳಿಗೆ ತಾಯಿ ತೀರ ಹತ್ತಿರದವಳು ಅನಿಸುತ್ತಾಳೆ. ಅಪರಾಧಿಯೆಂಬ ಮುದ್ರೆ ಒತ್ತಿದ ಮಕ್ಕಳನ್ನೂ ಸಹ ತನ್ನ ಮಡಿಲಲ್ಲಿ ತಂದುಕೊಳ್ಳುವ ತಾಕತ್ತು ಕೇವಲ ತಾಯಿಗೆ ಮಾತ್ರ ಇರುತ್ತದೆ. ಔರಂಗಾಬಾದಿನ ಜೈಲಿನಲ್ಲಿರುವ ಕೈದಿ ಅನಿಲ ಸುಭಾಷರಾವ ವೈದ್ಯ ಹೇಳುತ್ತಾನೆ, ನಿಜ ಹೇಳುತ್ತೇನೆ ಎನ್ನುವುದಕ್ಕಿಂತ ಜೈಲಿನಲ್ಲಿದ್ದು, ತನ್ನ ತಾಯಿಯ ಜತೆ ನಡೆಸಿದ ಈ ಸಂವಾದ ನೋಡಿರಿ :

*ಅವ್ವ,*
*ನೀನೆಷ್ಟು ಸಹಿಸಿದೆ*
*ನನಗಾಗಿ ಕಷ್ಟ, ನೋವು*
*ನಾನೀಗ ಶೂನ್ಯ*
*ನೀನು ದೂರವಿದ್ದಾಗಲೂ*

*ಜೈಲುವಾಸದ ಖೇದವಿಲ್ಲ*
*ಇದಂತೂ ದೈವದ ಭೋಗವೇ ಎಲ್ಲ*
*ದುಃಖ ಉಂಟು, ನನಗಾಗಿ*
*ನಿನ್ನ ವ್ಯಾಕುಲ ಉಸಿರಿಗೆ*

ಅಥವಾ

*ನಿನ್ನ ಉದರದಲಿ ಜನಿಸಿಯೂ ನಾ*
*ದುಃಖಗಳನ್ನು ಬಿತ್ತಿ ಹೋದೆ,*

ಕೈದಿಗಳಿಗೆ ಯಾವ ಬಗೆಯಲ್ಲಿ ತಾಯಿಯ ನೆನಪು ಆಗುತ್ತದೆಯೋ, ಅದೇ ರೀತಿಯಲ್ಲಿ ಪ್ರೇಯಸಿಯ ನೆನಪು ಕಾಡುತ್ತದೆ. ಈ 'ಪ್ರೇಯಸಿ' ಕವಿತೆ ಕಾಲ್ಪನಿಕವೋ ಅಥವಾ ವಾಸ್ತವ ಸತ್ಯವೋ ಗೊತ್ತಿಲ್ಲ. ಆದರೆ ಅನೇಕ ಕೈದಿಗಳ ಕವಿತೆಗಳಲ್ಲಿ ಪ್ರೀತಿ ಮತ್ತು ವಿರಹದ ಕಾವು ಇದೆ. ರಮೇಶ ಬಾಬುರಾವ ಖಾಡೆ ತನ್ನ ಮನಸ್ಸನ್ನು ಹೀಗೆ ತೆರೆದಿಡುತ್ತಾನೆ,

*ತೋರೆದು ನನ್ನ ಹೃದಯ*
*ಕಟ್ಟಿದೆ ಗೂಡೊಂದನ್ನು,*
*ಹೂಡಿದೆ ಅಲ್ಲಿ ಸಂಸಾರವನ್ನು*
*ಸಂತಸದಿಂದ,*
*ನಿನ್ನದೇ ಛಾಯೆಯೊಳಗೆ*
*ನನ್ನ ಕಾಯವ ಕಾಣದೆ*

ರವೀಂದ್ರ ಕೇವಲ ಬಬ್ಬಾವ ಎಂಬ ಕವಿಯಂತು ಎಂ. ಎ. ಬಿ. ಎಡ್. ಓದಿದವ. ಆತ ತನ್ನ 'ಯಾತನೆಯ ಮೃಗ ಜಲ' ಕವಿತೆಯಲ್ಲಿ ಹೀಗೆ ಬರೆಯುತ್ತಾನೆ.

*ನನ್ನ ಮನ ಹತೋಟಿಯಲ್ಲಿದ್ದರೂ*
*ಮನತುಂಬ ನಿನ್ನ ನುಡಿಗಳದೇ ಒನಪು*
*ಮರೆಯಬೇಕೆಂದು ಕೊಂಡರೂ*
*ಕಾಡುತ್ತದೆ ನಿನ್ನದೇ ನೆನಪು*
*ನಾನಿಂದು ನನ್ನ ಮೇಲೆಯೇ ರೋಸಿದೆ*
*ನಿನ್ನಂಥವಳನ್ನು ಪ್ರೀತಿಸಿ ಆದ್ದೇಗೆ ಮೋಸ ಹೋದೆ ?*

ಜೈಲಿನೊಳಗೆ ಬೇಸತ್ತುಹೋದ ಕೆಲವು ಕೈದಿಗಳಿಗೆ ಊರಿನ ನೆನಪು ದಟ್ಟವಾಗಿ ಕಾಡುತ್ತದೆ. ಆ ನೆನಪು, ಕಾಗದದ ಮೇಲೆ ಕವಿತೆಯಾಗಿ ಮೂಡುತ್ತದೆ. ಭ. ಲ. ಬಿರಾದಾರ ತನ್ನ ಊರನ್ನು ಹೀಗೆ ನೆನೆಯುತ್ತಾರೆ :

*ಒಂದಿತ್ತು ಊರು*
*ಅಲ್ಲಿತ್ತು ನನ್ನ ಸೂರು*
*ಆದರೆ ಈಗ ನಾನೆಂತು ಪೇಳಲಿ*
*ಊರ ಹೆಸರು ?*
*ತಿಳಿದೋ - ತಿಳಿಯದೋ ಕೃತ್ಯವೆಸಗಿದೆ*
*ದುಷ್ಟ ಚಕ್ರದೊಳಗಿನ ಕಗ್ಗಂಟಲಿ ಸಿಲುಕಿದೆ,*
*ಉಧ್ವಸ್ತಗೊಂಡಿತು ಅದು ಇದು ಎಲ್ಲವೂ ಕ್ಷಣದೊಳಗೆಲ್ಲ !*

ಹಲವಾರು ಕೈದಿಗಳು ಪ್ರೀತಿಯನ್ನು ಮೀರಿಹೋಗಿ, ವ್ಯವಸ್ಥೆಯ ಕುರಿತು ತೀರ ಗಂಭೀರವಾಗಿ ಆಲೋಚಿಸುತ್ತಾರೆ, ವ್ಯವಸ್ಥೆಯ ಮೇಲೆ ತೀವ್ರವಾಗಿ ಬರೆಯುತ್ತ ರಿಯಾಝು ಬಾದಶಹಾ ಮುಲ್ಲಾ ಹೇಳುತ್ತಾನೆ :

*ನಾನ್ಯಾವಾಗ ಈ ಜಗತ್ತಿನ ಇತಿಹಾಸ ಬರೆಯುವೆನೋ*
*ಅಂದು ನನ್ನ ಮೇಲಾದ ಘೋರ ಅನ್ಯಾಯ ದಾಖಲಿಸುವೆನು !*
*ನಿರ್ದೋಷಿಗಳನ್ನು ದೋಷಿಗಳೆಂದು ಠರಾಯಿಸೋ*
*ವ್ಯವಸ್ಥೆಯ ಇತಿಹಾಸ ಬರೆಯುವೆನು !*

ಈ ವ್ಯವಸ್ಥೆಯ ಮೂಲಕವೇ ನಾವು ಕೈದಿಗಳಾದೆವು. ವ್ಯವಸ್ಥೆಯಲ್ಲಿನ ತಪ್ಪುಗಳಿಂದಲೇ ನಮ್ಮ ಹಣೆಯ ಮೇಲೆ 'ಅಪರಾಧಿ'ಗಳೆಂಬ ಮುದ್ರೆ ಬಿತ್ತು. ಈ ತರಹದ ಭಾವನೆಗಳು ಬಹುಜನರಲ್ಲಿವೆ. ಅದನ್ನು ಅಭಿವ್ಯಕ್ತಿಸುವ ಬೇರೆ ವೇದಿಕೆಗಳಿಗಿಂತ ಕಾವ್ಯವೇ ಅವರಿಗೆ ಅತ್ಯಂತ ಪ್ರೀತಿಯ ವೇದಿಕೆಯೆನಿಸಿರಬಹುದು. ಸದಾಶಿವ ಯಾದವ ಗಾಯಕವಾಡ ಎಂಬ ಕೈದಿಯಂತೂ ತನ್ನ ಮೇಲಾದ ಅನ್ಯಾಯದ ಕೈಫಿಯತ್ತನ್ನು ನೇರವಾಗಿ ಭಗವಂತನಿಗೆ ತಿಳಿಸುತ್ತಾನೆ :

*ನನ್ನ ಜನುಮದ ಮೇಲೆ*
*ಅನ್ಯಾಯದ ಹಕ್ಕಿಯ ರೆಕ್ಕೆ ಪಟಪಟಿಸಿದೆ*
*ಈಗ ನಾ ಹೋಗಲೆಲ್ಲಿ ನಿನ ಬಿಟ್ಟು.....*
*ಹೇ ಭಗವಂತನೆ, ಕೃಪೆದೋರು ನಿನ್ನ ಪಾದ ಹಿಡಿದಿರುವೆ*

ಒಮ್ಮೆ ಕಳಂಕ ಹತ್ತಿತೆಂದರೆ ಮನಸ್ಸಿನ ಅವಸ್ಥೆ ನಿಜಕ್ಕೂ ಏನಾಗುತ್ತದೆ, ಸಮಾಜ ತಮ್ಮ ಕಡೆಗೆ ಹೇಗೆ ನೋಡುತ್ತದೆ ಎಂಬುದನ್ನು ಪ್ರಕಾಶ ತುಕಾರಾಮ ಕದಮ್ ಇಲ್ಲಿ ನಿವೇದಿಸುತ್ತಾರೆ :

*ಅಪರಾಧಿ ಕಳಂಕ ನನ್ನ ಹಣೆ ಮೇಲ*
*ಕಬ್ಬಿಣ ಕೈಕೋಳ ತೊಟ್ಟ ಕೈಗಳು*
*ನನ್ನ ಬಾಂಧವರು ದೂರದಿಂದಲೇ ನೋಡುವರು*

ಅಥವಾ

*ಮನುಷ್ಯನೆಂದು ನನ್ನೊಳು ರುಬಾಬಿಲ್ಲ*
*ಜನಮಾನಸದೊಳು ನನ್ನ ಹೆಸರೇ ಇಲ್ಲ.*

ಮನೋಹರ ರೇಣಿಭಿಸೆ ತನಗೆ ಶಿಕ್ಷೆದೊರೆತುದಕ್ಕೆ ತನ್ನನ್ನೇ ಪ್ರಶ್ನಿಸುತ್ತಾನೆ, :

*ನನ್ನ ಬದುಕಿನಲ್ಲಿ ಹೇಗೆ ಬಂತು ವನವಾಸ*
*ಹೃದಯ ಒಡೆಯಿತು ಭೂಮಿ ಬಾಯ್ತೆರೆಯಿತು*
*ಆಯಿತು ನನ್ನದೆಲ್ಲ ಸರ್ವನಾಶ*
*ನಾನೆಂದು ದಡ ಸೇರಿಯೇನು*
*ಸುರಕ್ಷಿತ ಮನುಷ್ಯನಾಗಿ ನಾನೀಗ ಉಳಿದಿಲ್ಲ*
*ಮನಸ್ಸು ಸ್ಥಿರವಾಗಿಲ್ಲ.*

ಸೆರೆಮನೆಯ ಜೀವನದಿಂದ ಆಯುಷ್ಯದಲ್ಲಿ ಕತ್ತಲೆ ಮುಸುಕಿತು, ದುಃಖದ ಪರ್ವ ಪ್ರಾರಂಭವಾಯಿತು. ಸಮಾಜದಲ್ಲಿ ನಮ್ಮ ಪ್ರತಿಷ್ಠೆ ಉಳಿಯಲಿಲ್ಲ. ಬಂಧು- ಬಾಂಧವರು ದೂರವಾದರು. ಆದರೆ ಈ ದಿನಗಳೂ ಕಳೆದು ಹೋಗುತ್ತವೆ. ಕತ್ತಲೆಯಲ್ಲಿಯೂ ಒಂದು ಮಿಂಚು ಕಾಣಿಸುತ್ತದೆ. ಅದರ ಬೆಳಕಿನಲ್ಲಿ ಭವಿಷ್ಯಕಾಲವನ್ನು ಕಳೆಯಬಹುದು. ಈ ಆಶಾವಾದ ಅನೇಕಕವಿತೆಗಳಲ್ಲಿ ಇದೆ. ಅಂತಿಮವಾಗಿ ಮನುಷ್ಯ ಆಶಾವಾದಿಯಾಗಿ ಬದುಕುತ್ತಾನೆ. ಕತ್ತಲೆಯ ಗವಿಯಲ್ಲಿ ಬೆಳಕು ಬೀರುವ ಮನುಷ್ಯರೂ ಇರುತ್ತಾರೆ, ಬೆಳಕನ್ನು ಕಂಡು ಪಶ್ಚಾತ್ತಾಪ ಪಡುವ ಮನುಷ್ಯರೂ ಇರುತ್ತಾರೆ. ಮನುಷ್ಯರ ರೂಪಗಳು ಅನೇಕ. ಅವುಗಳಲ್ಲಿ ಕೈದಿಗಳ ರೂಪವೂ ಒಂದು.

ಕೈದಿಗಳ ಹಲವಾರು ಕವಿತೆಗಳಲ್ಲಿ ಪಶ್ಚಾತ್ತಾಪದ ಭಾವನೆಯಿದೆ. ಅಜಾಗರೂಕತೆಯಿಂದ ಅಥವಾ ಭಾವನೆಯ ಬಿರುಗಾಳಿಗೆ ಸಿಲುಕಿ ಅವರ ಕೈಯಿಂದ ವಿಪರೀತ ಘಟನೆಗಳು ಜರುಗಿದ ವಿಷದ ಭಾಷ್ಯವು ಪ್ರಕಟಗೊಂಡಿದೆ. ಬೇರೆಯವರಿಂದ ಇಂಥವು ನಡೆಯಕೂಡದೆಂದು ಎಚ್ಚರಿಕೆಯ ಉಪದೇಶವನ್ನೂ ಅವರು ಮಾಡುತ್ತಾರೆ. ಮನುಷ್ಯನೊಳಗಿನ ವಿಕೃತಿ ಅವನಲ್ಲಿಯ ರಕ್ಕಸನನ್ನು ಹೇಗೆ ಬಡಿದೆಬ್ಬಿಸುತ್ತದೆ. ಎನ್ನುವುದನ್ನು ಹೇಳುತ್ತಾರೆ. ದತ್ತಾ ಪಾಟೀಲ-ರಹಾಣೆಯೆಂಬ ಕೈದಿ ಜೈಲುವಾಸವೆಂದರೆ ಪಶ್ಚಾತ್ತಾಪ ಪಡುವ ಮನುಷ್ಯರ ಜಗತ್ತೆಂದು ಕರೆದಿದ್ದಾನೆ. ಅಸಲಿ ಗುನ್ಹೆಗಾರದಿಂದ ಜೈಲಿನ ಪ್ರಪಂಚ ಹೇಗೆ ದೂರವಾಗಿದೆಯೆಂದು ಹೇಳುತ್ತ ಕವಿ ಹೇಳುತ್ತಾನೆ,

*ದೋಷ, ನಿರ್ದೋಷ, ನಿಷ್ಪಾಪ*
*ಎಂದು ನಡಕೊಳ್ಳುವ ಕಾನೂನಿನ*
*ಕಪಿಮುಷ್ಟಿಯಿಂದ ನುಣುಚಿಕೊಂಡು ಬದುಕುವ*
*ಶ್ರೀಸಾಮಾನ್ಯನ ವಿಶ್ವಾಸಘಾತ ಮಾಡುವ*
*ಅಸಲಿ ಗುನ್ಹೆಗಾರರಿಂದ ದೂರವಿರುವ*
*ಮನುಷ್ಯರ ಜಗತ್ತೆಂದರೆ.... ಜೈಲು.*

ಸಮಾಜದ ವ್ಯವಸ್ಥೆಯ ಮೂಲಕ ನಾವು ಕೈದಿಗಳಾದೆವು. ಕಾನೂನಿನ ಸಮರದಲ್ಲಿ ಸೋತು ಕೈದಿಗಳಾಗಿದ್ದೇವೆಂಬ ಭಾವನೆ ಹಲವು ಕವಿತೆಗಳಲ್ಲಿ ಕಾಣಸಿಗುತ್ತದೆ.

ಜೈಲಿನಲ್ಲಿ ಕಾಲಿಟ್ಟೊಡನೆ ತಮ್ಮ ಅವಸ್ಥೆ ಯಾವ ಬಗೆಯದಾಗಿರುತ್ತದೆಂಬುದನ್ನು ಸಂತೋಷ ಸಟವಾಜಿ ಸಸಾಣೆ ಮಾರ್ಮಿಕವಾಗಿ ಅಭಿವ್ಯಕ್ತಿಸುತ್ತಾನೆ,

*ಸ್ವಚ್ಛಂದ ಸುಖೀ ಗಿಳಿ ನಾನಾಗಿದ್ದೆ*
*ಈಗ ನಾನು ಪಂಜರದಲ್ಲಿ ಕೈದು*
*ಹೇಗೆ ಹೇಳಲಿ ಪರಿಸ್ಥಿತಿ ಬಲು ಬಿಕ್ಕಟ್ಟು*

ಜೈಲಿನ ಬದುಕಿನ ಸಂದರ್ಭದಲ್ಲಿ ದೇವರ ಹತ್ತಿರ ಕೈಮುಗಿಯುತ್ತ ಮಂಡಿಸುತ್ತ ರಮೇಶ ಬಾಬುರಾವ ಖಾಡೆ ಹೇಳುತ್ತಾನೆ :

*ನಿರಂತರ ಬಂಧನದಲಿ*
*ಇಡೀ ಬದುಕನ್ನು ಕಳೆಯುವುದು*
*ಕಣ್ಣೊಳಗಿನ ನೀರು*
*ಧಾರಾಕಾರ ಹರಿಯುವುದು*
*ಹೇಳು ದೇವರೆ, ಹೇಳು*
*ಎಷ್ಟು ದಿನಾಂತ ಭೋಗಿಸೋದು ?*
*ಕೇವಲ ಬರೀ ಕೇವಲ*
*ಚಾನ್ಸನ್ನೇ ದಿಟ್ಟಿಸುವುದು !*

ಶಿವಾಜಿ ಸಾಳುಂಕೆ ರಚಿಸಿದ ಕವಿತೆಗಳು ಹೆಚ್ಚು ಪಕ್ವವಾಗಿವೆ. ಜೈಲಿನಲ್ಲಿ ಕತ್ತಲು ಬಿಟ್ಟರೆ ಮತ್ತೇನು ದೊರೆಯುತ್ತದೆಂಬುದನ್ನು ಸಾಳುಂಕೆ ಹೇಳುವಾಗ ಬೆಳಕು ಮತ್ತು ಕತ್ತಲೆಗಳ ಭಾವನೆಗಳ ದ್ವಂದ್ವಗಳನ್ನುನಮೂದಿಸುತ್ತಾನೆ. ಆತನ ಸಾಲುಗಳು ಹೀಗಿವೆ,

*ಕಾಲದ ಕ್ರೂರ ಪ್ರಹಾರ ತಾಳಲು*
*ಮನಸ್ಸು ಇಲ್ಲಿ ಹದಗೊಳ್ಳುತ್ತದೆ !*
*ಯಾರದೋ ನವಿರಾದ ನೆನಪಿಂದ*
*ಹೃದಯ ಮೊಲದಂತೆ ಮುದುಡಿ ಕಂಪಿಸುತ್ತದೆ !*

ಇಷ್ಟಕ್ಕೆ ನಿಲ್ಲದೆ ಆತ ಮುಂದೆ ಹೇಳುತ್ತಾನೆ,

*ನಾವೆಂಥ ದರಿದ್ರರೆಂದರೆ, ಬಾಜಾರದೊಳಗೆ ಮರ್ಯಾದೆಯಿಲ್ಲ*
*ಪಾಲಿಗೆ ಬಂದದ್ದು ಸೋಲೆ, ಗೆಲ್ಲುವ ಪಠವಿಲ್ಲ !*
*ಚಂದಿರ ಕಳುವಾಗದ ರಾತ್ರಿಗಳೇ ಇಲ್ಲಿಲ್ಲ*
*ಚುಕ್ಕಿಗಳದೇನು ಬಿಡು, ಚಂದಿರನಿಗೂ ಉಳಿಗಾಲವಿಲ್ಲ !*

ಮನುಷ್ಯನಲ್ಲಿ ಹುದುಗಿಕೊಂಡ ವಿವಿಧ ಭಾವಪದರುಗಳನ್ನು ಹಿತೇಶ ಶಹಾ ಅತ್ಯಂತ ಉತ್ತಮ ರೀತಿಯಿಂದ ಬಣ್ಣಿಸಿದ್ದಾನೆ. ದೈವತ್ವದ ಕಡೆಗೆ ಸಾಗುವಾತನೂ ಮನುಷ್ಯನೇ ಹಾಗೂ ಸೈತಾನನಾಗುವವನೂ ಮನುಷ್ಯನೇ. ಆತನ ಪ್ರಯಾಣವು ಏನಾದರೂ ಸಾಧಿಸಲೆಂದೇ ನಡೆದಿರುತ್ತದೆ. ಒಮ್ಮೆ ಯೋಗ್ಯದಾರಿ ಲಭಿಸಿದರೆ ಮತ್ತೊಮ್ಮೆ ಅಯೋಗ್ಯಮಾರ್ಗ. ಮನುಷ್ಯನ ಪ್ರಯಾಣ ಮಾತ್ರ ನಿರಂತರವಾಗಿ ನಡೆದಿರುತ್ತದೆ. ಹಿತೇಶ ಶಹಾ ಆ ಯಾತ್ರೆಯ ಅನುಭವವನ್ನು ಈ ಸಾಲುಗಳಲ್ಲಿ ಸಾದರ ಪಡಿಸುತ್ತಾನೆ,

*ಮನುಷ್ಯನಂತೂ ಅಂತರಾಳದೊಳಗೆಲ್ಲೋ*
*ಎಷ್ಟು ಸಾರೆ ಯಾತ್ರೆ ನಡೆಸುತ್ತಾನೆ ?*
*ಲಾಲಸೆಯಿಂದೊಮ್ಮೆ, ಶ್ರದ್ಧೆಯುತ ಇನ್ನೊಮ್ಮೆ*
*ಒಮ್ಮೊಮ್ಮೆ ಕ್ರೋಧದಿಂದ*
*ಎಂದಾದರೊಮ್ಮೆ ರಾಕ್ಷಸನಾಗಲು*
*ಒಂದೊಂದು ಸರತಿ ದೇವರಾಗಲು*
*ಯಾವತ್ತೂ ಅಂತರವನ್ನು ಕಿರಿದುಗೊಳಿಸುತ್ತಿರುತ್ತಾನೆ.*

ಒಬ್ಬ ವ್ಯಕ್ತಿ ಜೈಲಲ್ಲಿ ಕಾಲಿಟ್ಟರೆ, ಅವನ ಮೇಲೆ ಅಪರಾಧ ಸಿದ್ಧಗೊಂಡರೆ ಮುಗಿಯಿತು, ಮೆಲ್ಲಗೆ ಸಂಬಂಧಿಕರು ಅವನಿಂದ ದೂರವಾಗುತ್ತಾರೆ. ಇಡೀ ಸಮಾಜವೇ ದೂರ ಸರಿದು ಬಿಡುತ್ತದೆ. ಬಹಿಷ್ಕೃತರಂತೆ ಬದುಕುವ ಬದುಕು ಅವರದಾಗುತ್ತದೆ. ನಿನ್ನೆತನಕ ಎಲ್ಲರೂ ಜತೆಗಿದ್ದರು ಇಂದು ಯಾರೂ ಇಲ್ಲ. ಇಂಥ ಸ್ಥಿತಿ ಎದುರಾಗುತ್ತದೆ. ಯಾರಾದರೂ ಜೈಲಿಗೆ ಭೇಟಿಯಾಗಲು ಬಂದರೆ ಆ ಪ್ರಸಂಗ ಅತ್ಯಂತ ಅಪರೂಪದ್ದಾಗಿರುತ್ತದೆ. ಮಿತ್ರ, ನೆಂಟರಿಷ್ಟರ ಭೇಟಿಯೆಂದರೆ ಅವನ ಕತ್ತಲು ಬದುಕಿನೊಳಗೆ ಮೂಡಿದ ಆಸೆಯ ಕಿರಣವಿದ್ದಂತೆ. ಈ ಕಿರಣಗಳು ಒಮ್ಮೆ ಮನುಷ್ಯರ ರೂಪದಲ್ಲಿ, ಮತ್ತೊಮ್ಮೆ ಪತ್ರಗಳ ರೂಪದಲ್ಲಿ, ಮಗದೊಮ್ಮೆ ಬೇರೆ ಸಂದೇಶಗಳ ರೂಪದಲ್ಲಿ ಬರುತ್ತಿರಬೇಕೆಂದು ಅಪೇಕ್ಷಿಸುತ್ತಾನೆ. ಕೈದಿ ಪತ್ರದ ಮೂಲಕ ಹೃದಯತುಂಬಿ ಮಾತನಾಡುತ್ತಾನೆ. ಭೇಟಿ ಮಾಡಲು ಬಂದವರ ಜತೆ ಎಷ್ಟು ಮಾತಾಡಲಿ, ಎಷ್ಟು ಬಿಡಲಿ ಎಂಬ ಉತ್ಸಾಹ ತುಂಬಿ ಬರುತ್ತದೆ. ಬಂದವರ ಜತೆ ಮಾತುಗಳು ಮುಗಿಯದಿರಲಿ ಎಂದೆನಿಸುತ್ತದೆ. ಬಹಳಷ್ಟು ಕೈದಿಗಳಿಗೆ ತಮಗೆ ಬರುವ ಪತ್ರಗಳು ಉದ್ದುದ್ದ ಬರೆದವುಗಳಾಗಿರಬೇಕು, ತಮ್ಮ ಶಿಕ್ಷೆ

ಮುಗಿಯುವ ತನಕ ಪತ್ರಗಳು ಬರುತ್ತಲೇ ಇರಬೇಕೆಂದು ಅನಿಸುತ್ತದೆ. ಜೈಲಿನಲ್ಲಿ ಏಕಾಂಗಿತನ ಚುಚ್ಚುತ್ತಿರುತ್ತದೆ. ಅದನ್ನು ಮರೆಯಲು, ಒಬ್ಬಂಟಿತನ ಹೋಗಲಾಡಿಸಲು ಆತನಿಗೆ ಈ ಭಿನ್ನ ಭಿನ್ನ ಸ್ವರೂಪದ ಸಂವಾದಗಳ ಅಗತ್ಯತೆ ಬಹಳಷ್ಟು ಕಾಡುತ್ತದೆ. ಗೂಡಿನಲ್ಲಿಯ ಮರಿಹಕ್ಕಿ ತಾಯಿಹಕ್ಕಿಯ ಆಗಮನಕ್ಕಾಗಿ ದಾರಿಕಾಯುವಂತೆ ಕೈದಿ ಪತ್ರಗಳ ದಾರಿಕಾಯುತ್ತಿರುತ್ತಾನೆ. ಆ ಪತ್ರಕ್ಕಾಗಿ ಅತನ ಜೀವದ ತಳಮಳ, ಸಂತಾಪಗಳನ್ನು ಶಿವಾಜಿ ಸಾಳುಂಕೆ ಎಂಬ ಕೈದಿ ಅತ್ಯಂತ ಮನಮಿಡಿಯುವ ಪದಗಳಲ್ಲಿ ಸೆರೆಹಿಡಿದಿದ್ದಾನೆ,

*ಜೈಲಿನ ಪತ್ರ*
*ಜಾಮೀನು ಏನಾತು ? ಅಂತ ಕೇಳತದ*
*ಜಮೀನದಾಗ ಏನು ಬಿತ್ತೀರಿ ? ಅಂತಾನೂ ವಿಚಾರಿಸತದ*
*ಜೈಲಿನ ಪತ್ರ*
*ಮನೆ ಮಠ ಕಳಕೊಂಡ ವೇದನೆಯಿಂದ*
*ಪತ್ರ ಮನೀನ ಜ್ಞಾಪಿಸತದ*
*ಶಬ್ದಗಳ ಭಾರ ಹೊರತದ,*
*ಏನೇನೋ ಭಾಳ ಹೇಳತಿರತದ*

ರಾಜಕೀಯ ಕೈದಿಗಳಾಗಿ ಜೈಲಿಗೆ ಹೋದವರು ಅತ್ಯಂತ ಶ್ರೇಷ್ಠ ಸಾಹಿತ್ಯ ರಚಿಸಿದ್ದಾರೆ. ಮಹಾತ್ಮಾ ಗಾಂಧಿ, ಲೋಕಮಾನ್ಯ ಟಿಳಕ, ಪಂಡಿತ ಜವಾಹರಲಾಲ ನೆಹರು, ಜಯಪ್ರಕಾಶ ನಾರಾಯಣ, ಆಚಾರ್ಯ ವಿನೋಬಾ ಭಾವೆ, ಸಾನೆ ಗುರೂಜಿ ಹೀಗೆ ಬಹಳಷ್ಟು ರಾಜಕೀಯ ನಾಯಕರ, ಸಮಾಜ ಸೇವಕರ ಹೆಸರುಗಳನ್ನು ಪಟ್ಟಿಮಾಡಬಹುದು. ಜೈಲಿನಲ್ಲಿದ್ದುಕೊಂಡು ಬರೆದ ಅವರ ಸಾಹಿತ್ಯ ಅಮರವಾಗಿದೆ. ಆದರೆ, ಬೇರೆ ಬೇರೆ ಪ್ರಕಾರದ ಕ್ರಿಮಿನಲ್ ಮತ್ತು ಸಿವಿಲ್ ಗುನ್ಹೆ ಮಾಡಿ ಜೈಲುವಾಸ ಕಂಡ ಅಪರಾಧಿಗಳು ಆತ್ಮ ಪರೀಕ್ಷಣೆಗೆ ತಮ್ಮನ್ನು ಒಳಪಡಿಸಿಕೊಂಡಿದ್ದಾರೆ. ಅಂಥವರ ಸಾಹಿತ್ಯ ಮಾತ್ರ ವಿಪುಲವಾಗಿ ಹೊರಜಗತ್ತಿಗೆ ಇನ್ನೂ ಉಪಲಬ್ಧವಾಗಿಲ್ಲ. ಈಚೆಗೆ ಜೈಲಿನಲ್ಲಿ ಕವಿಗೋಷ್ಠಿ, ಸಾಹಿತ್ಯ ಸಮ್ಮೇಳನಗಳು ನಡೆಯುತ್ತಲಿವೆ. ವಿಪಶ್ಯನದ ಕ್ಲಾಸುಗಳನ್ನು ನಡೆಸುತ್ತಿದ್ದಾರೆ. ಶಿಕ್ಷಣದ ಅವಕಾಶ ಕಲ್ಪಿಸಿಕೊಡುತ್ತಿದ್ದಾರೆ. ಯಾವ್ಯಾವುದೋ ಕಾರಣಗಳಿಂದ ಅಪರಾಧಿಗಳಾದವರ ಒಳಗಿನ ಮನುಷ್ಯನನ್ನು ಜಾಗೃತಗೊಳಿಸುವ ಮತ್ತು ಜತನವಾಗಿಡಿಸುವ ಪ್ರಯತ್ನ ಬೇರೆ ಬೇರೆ ಮಾರ್ಗಗಳಿಂದ ನಡೆಯುತ್ತಲಿದೆ. ಕೈದಿಗಳು ಸ್ವಂತಕ್ಕೆ ಪ್ರಶ್ನೆಕೇಳಿಕೊಂಡು ಹುಡುಕಿದ ಉತ್ತರಗಳ ಪ್ರತಿಬಿಂಬದಂತೆಯೂ ಅವರ ಕಾವ್ಯವನ್ನು ಗಮನಿಸಬೇಕಾಗುತ್ತದೆ. ಯಾಕೆಂದರೆ ಮೂಲದಲ್ಲಿ ಕವಿತೆಗೂ ಕರುಳಿಗೂ ಗಾಢ ಸಂಬಂಧವಿರುತ್ತದೆ. ಕೈದಿಗಳ ಭಾವ ವಿಶ್ವದ ಶೋಧ ಪಡೆಯುವದಕ್ಕಾಗಿ, ಕೊಠಡಿಯಲ್ಲೂ ಅವರ ಕರುಳಲ್ಲಿ, ಹೃದಯದಲ್ಲಿ ಏಳುವ ತರಂಗಗಳನ್ನು ಕಾಣಲಿಕ್ಕಾಗಿ, ಪಶ್ಚಾತ್ತಾಪದ ಜ್ವರದಲ್ಲಿ ಸುಟ್ಟು ಒದ್ದಾಡುವ ಅವರ

ಮನಸ್ಸನ್ನು ನೋಡುವುದಕ್ಕಾಗಿ, ಭವಿಷ್ಯದ ಸಂದರ್ಭದಲ್ಲಿ ಅವರು ನಿರ್ಮಿಸಿದ ಕನಸಿನ ಗೋಪುರ ಕಾಣುವುದಕ್ಕಾಗಿ ಕವಿತೆ ಖಂಡಿತವಾಗಿಯೂ ಪ್ರಯೋಜನಕ್ಕೆ ಬರುವ ಮಾಧ್ಯಮವೆಂದು ನಾನು ನಂಬಿದ್ದೇನೆ. ಈ ಸಂಕಲನದಲ್ಲಿಯ ಕೆಲ ಕವಿಗಳು ತಮ್ಮ ಜೀವನದಲ್ಲೇ ಮೊಟ್ಟ ಮೊದಲುಬಾರಿಗೆ, ಅದೂ ಸಹ ಜೈಲಿನಲ್ಲಿಯೇ ಕವಿತೆಗಳನ್ನು ರಚಿಸಿದ್ದಾರೆ. ಕೆಲವರಿಗೆ ಜೀವಾವಧಿ ಶಿಕ್ಷೆಯಾಗಿದ್ದರೆ, ಇನ್ನೂ ಹಲವರಿಗೆ ವಿಶಿಷ್ಟ ಕಾಲಾವಧಿಗೆ ಮಾತ್ರ ಶಿಕ್ಷೆ ನೀಡಲಾಗಿದೆ. ಶಿಕ್ಷೆ ಅನುಭವಿಸಿ ಬಂದಬಳಿಕಾದರೂ ಸಮಾಜ ತಮ್ಮನ್ನು ಅರಿತುಕೊಳ್ಳಬೇಕೆಂಬ ಆರ್ತ ದನಿಯೂ ಕವಿತೆಗಳಲ್ಲಿ ಮೂಡಿದೆ. ಒಂದೇ ವೇಳೆಯಲ್ಲಿ ಸ್ವಂತಕ್ಕೆ, ಸಮಾಜದೊಂದಿಗೆ ಮತ್ತು ನಿರ್ಮಾಣಗೊಂಡ ವ್ಯವಸ್ಥೆಯ ಸಂಗಡ ನಡೆಸಿದ ಸಂವಾದವೇ ಈ ಕವಿತೆಗಳು ಎಂಬ ಭಾವನೆ ನನ್ನದು.

ಹಬ್ಬ ಹರಿದಿನಗಳಂದು ಕೈದಿಗಳಿಗೆ ತಮ್ಮ ಸಂಬಂಧಿಕರ ನೆನಪು ಅತಿತೀವ್ರವಾಗಿ ಬಾಧಿಸುತ್ತದೆ. ಅದರಲ್ಲೂ ರಕ್ಷಾಬಂಧನ, ದೀಪಾವಳಿಗಳಂಥ ಹಬ್ಬಗಳು ಬಂದಾಗ ಪ್ರಖರವಾಗಿ ಕಾಡುತ್ತದೆ. ಕೆಲವು ವೇಳೆಯಲ್ಲಿ ಸಂಬಂಧಿಕರು ಬರುವುದೇ ಇಲ್ಲ. ಆದರೂ ಮನದೊಳಗಿನ ಭಾವನೆಗಳೇನು ಹದ್ದು ಪಾರಾಗುವುದಿಲ್ಲ. ಅವುಗಳನ್ನು ಶಬ್ದಬದ್ಧವಾಗಿಸಿ ಕೈದಿ ಕಾವ್ಯ ಕಟ್ಟುತ್ತಾನೆ. ಕವಿತೆಗಳಲ್ಲಿಯೇ ಆತ ಹಬ್ಬವನ್ನು ಆಚರಿಸುತ್ತಾನೆ. ಪರಶುರಾಮ ಉಮಾ ಮೆರಂಡೆ ಎಂಬ ಕೈದಿ 'ರಕ್ಷಾ ಬಂಧನ' ಕವಿತೆಯಲ್ಲಿ ಮನದಳಲು ತೋಡಿಕೊಳ್ಳುತ್ತಾನೆ,

*ಬಂತು ಬಂತು ರಕ್ಷಾ ಬಂಧನ*
*ಕಣ್ಣೆ ದುರಿಗಿಲ್ಲ ತಂಗಿ,*
*ನಾನೀಗ ಜೈಲಲ್ಲಿ ಕೈದು*
*ಆದರೂ ನೆನಪು ಮನದೊಳಗೆ ಕಾಡುವುದು.*

ಮನುಷ್ಯ ಎಲ್ಲಿದ್ದರೂ ಸರಿ, ಆತನ ಸಂವೇದನೆಗಳು ಜಾಗೃತವಾಗಿಯೇ ಇರುತ್ತವೆ. ಜೈಲೂ ಸಹ ಅಪವಾದವಲ್ಲ. ಜೈಲು ದೇಹದ ಮೇಲೆ ನಿಯಂತ್ರಣವಿಟ್ಟಿದೆ. ಹೊರಗೆ ಹೋಗುವ ದೈಹಿಕ ಮಾರ್ಗ ಮುಚ್ಚಿದೆ. ಬೇಡಿಗಳು ಕೈಗಳನ್ನು ಅಲಂಕರಿಸಿವೆ. ಮನಸ್ಸು ಮಾತ್ರ ಎಲ್ಲದರಿಂದಲೂ ಮುಕ್ತವಾಗಿದೆ. ಕದಾಚಿತ್ ಅದು ರಾಖಿ ಕಟ್ಟಿಕೊಂಡು ಬಂದಿರಲೂಬಹುದು. ಜೈಲಿನ ಈ ಕವಿಗಳಿಗೆ ಈ ಸಂಬಂಧಗಳು ಹೇಗೆ ನೆನಪಾಗುತ್ತವೆಯೋ ಹಾಗೆ ಬಾಲ್ಯವು ನೆನಪಾಗುತ್ತದೆ. ಹಳ್ಳಿಯ ಮಣ್ಣಿನ ವಾಸನೆ ಮೂಗಿಗೆ ಅಡರುತ್ತದೆ. ಇದೇ ಮಣ್ಣಿಂದ ಹುಟ್ಟಿದ ಸಂಸ್ಕೃತಿ ನೆನಪಾಗುತ್ತದೆ. ಕೈಜಾರಿದ ಕ್ಷಣಗಳು ನೆನಪಾಗುತ್ತವೆ. ಇವುಗಳೆಲ್ಲದರ ಲೆಕ್ಕಪತ್ರವನ್ನೂ ಆತ ಮಾಡುತ್ತಾನೆ. ಬಾಲ್ಯದ ಕುರಿತು ಮೆರಂಡೆ ಹೇಳುತ್ತಾನೆ,

*ಮೊಲೆಗೂಸು ನಾ ಬೆಳೆಯುತ್ತಿದ್ದೆ ತಾಯ ಮಡಿಲಲಿ*
*ಬೆರಳು ಚೀಪುತಿದ್ದೆ ಬಾಯಲ್ಲಿಟ್ಟು*
*ಮೂರ್ನಾಲ್ಕು ವರುಷದ ಆ ಎಳೆ ವಯಸಲಿ*

ಬಾಲ್ಯದ ವರ್ಣನೆ ಮಾಡುತ್ತ ಮಾಡುತ್ತಲೇ ಕವಿ ಜೀವನದೊಳಗೆ ಅಪಘಾತದ ತಿರುವಿಗೆ ಬರುತ್ತಾನೆ ಮತ್ತು ಅಪರಾಧಿಯಾಗಿಬಿಡುತ್ತಾನೆ. ಬಾಲ್ಯದಿಂದ ಅಪರಾಧಿವರೆಗಿನ ಎಲ್ಲ ಪಯಣವನ್ನು ಕಾವ್ಯದಲ್ಲಿ ಹಿಡಿದಿಡಲು ಯತ್ನಿಸುತ್ತಾನೆ.

ಆತ ಮುಂದೆ ಹೀಗೆ ಹೇಳುತ್ತಾನೆ,

*ಆಗಲಿಲ್ಲ ನನಗೆ ಸುಖವಾಗಿಡಲು ನನ್ನ ಕುಟುಂಬ*
*ಹುಚ್ಚುಚ್ಚಾಗಿ ವರ್ತಿಸಿದೆ, ಭವಿಷ್ಯದ ಚಿಂತೆ ಮಾಡಲೇ ಇಲ್ಲ*
*ಅಜ್ಞಾನದ ಭರದಲಿ, ನಾ ಸೇರಿದೆ ಜೈಲಲಿ*
*ಭ್ರಮೆ ಕಳಚಿ ದೂರಾಯಿತು, ಬೆಳಕು ಮೂಡಿತು ಮಸ್ತಕದಲಿ.*

ಜೈಲಿನೊಳಗಿದ್ದು ಶಿಕ್ಷೆ ಭೋಗಿಸುವ ಮನುಷ್ಯ ತನ್ನೊಂದಿಗೆ ನಡೆಸುವಷ್ಟು ಸಂವಾದವನ್ನು ಬೇರೆ ಯಾರೂ ನಡೆಸಲಾರರು. ಒಂದರ್ಥದಲ್ಲಿ ಸಂವಾದದ ಮೂಲಕ ಆತ ಸ್ವಂತ ಸ್ವಂತದ್ವಾದ ಸಾಕ್ಷಿಗಳನ್ನು ಹೇಳಿಕೊಳ್ಳುತ್ತಿರಬಹುದು. ಕಾವ್ಯದ ಮೇಲೂ ತುಂಬು ಹೃದಯದ ಪ್ರೀತಿಯ ಧಾರೆಯೆರೆಯುತ್ತಾನೆ. ಬಾಗಿಲು, ಕಿಟಕಿಗಳು ಬಂದಾಗಿರುವ ಇಮಾರತಿಯಲ್ಲಿ ಆತ ಯಾವತ್ತೂ ಮನದ ಹೆಬ್ಬಾಗಿಲನ್ನು ತೆರೆದೇ ಇಟ್ಟಿರುತ್ತಾನೆ. ಯಾಕೆಂದರೆ ಅದರಿಂದಲೇ ಕಾವ್ಯ ಜನ್ಮ ತಾಳುತ್ತದೆ ಮತ್ತು ಅದೇ ಆತನ ಖರೇ ಸಂಗಾತಿಯಾಗುತ್ತದೆ.

ನಾಶಿಕ ಶಹರಿನ ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿಶ್ರೇಷ್ಠ ಕುಸುಮಾಗ್ರಜ (ವಿ. ವಾ. ಶಿರವಾಡಕರ) ಅವರು ಅನೇಕ ಸಲ ಅಲ್ಲಿಯ ಕೇಂದ್ರ ಕಾರಾಗೃಹಕ್ಕೆ ಭೇಟಿಕೊಟ್ಟರು. ಅವರ ಸಂಗಡ ನಾನೂ ಕೆಲವು ವೇಳೆ ಹೋದೆ. ಕುಸುಮಾಗ್ರಜರು ಜೈಲಿಗೆ ಭೇಟಿಯಿತ್ತಾಗಲೆಲ್ಲ ಅಲ್ಲಿ ಕವಿಗೋಷ್ಠಿ ನಡೆಯುತ್ತಿತ್ತು. ಜೈಲಿನಲ್ಲಿರುವ ಕೈದಿಗಳು ತಮ್ಮ ಕವಿತೆಗಳನ್ನು ನಿವೇದಿಸುತ್ತಿದ್ದರು. ಕುಸುಮಾಗ್ರಜರನ್ನು ಜನರು ಪ್ರೀತಿಯಿಂದ ತಾತ್ಯಾಸಾಹೇಬ ಎಂದು ಕರೆಯುತ್ತಿದ್ದರು. ಕೈದಿಗಳು ತಾತ್ಯಾಸಾಹೇಬರು ತಮ್ಮ ಬೆನ್ನ ಮೇಲೆ ಮೃದುವಾದ ವಾತ್ಸಲ್ಯದ ಸ್ಪರ್ಶ ನೀಡಬೇಕೆಂದು ಅಪೇಕ್ಷಿಸುತ್ತಿದ್ದರು. ತಾತ್ಯಾಸಾಹೇಬರು ಕವಿತೆಗಳನ್ನು ಆಲಿಸಿದೊಡನೆ ಕೈದಿಗಳಲ್ಲಿ ಉತ್ಸಾಹ ಉಕ್ಕೇರುತ್ತಿತ್ತು. ಆ ಹುರುಪಿನಲ್ಲಿ ಕೈದಿಗಳು ಮತ್ತಷ್ಟು ಕವಿತೆಗಳನ್ನು ರಚಿಸುತ್ತಿದ್ದರು. ನಾಶಿಕ ಜೈಲಿನ ಕವಿತೆಗಳನ್ನು ಒಂದೆಡೆ ಸೇರಿಸಿ ಕವನ ಸಂಕಲನ ತರುವ ಕಲ್ಪನೆ ಇಲ್ಲೇ ಚಿಗುರಿತು. ಅದರ ಹೊಣೆಯನ್ನು ನಾನು ಹೊತ್ತೆ. ಶುರುವಾತಿನಲ್ಲಿ

ಮೂರ್ನಾಲ್ಕು ಕವಿತೆ ಪಡೆದು 'ಗಜಾ ಆಡಚ್ಯಾ ಕವಿತಾ ' (ಸರಳು ಮರೆಯ ಕವಿತೆಗಳು ) ಈ ತಲೆ ಬರಹದಡಿಯಲ್ಲಿ 'ಸಕಾಳ' ಪತ್ರಿಕೆಯಲ್ಲಿ ಲೇಖನವನ್ನೂ ಬರೆದೆ. ಅಷ್ಟಕ್ಕೆ ಸಮಾಧಾನವಾಗಲಿಲ್ಲ. ಇನ್ನೂ ಕೆಲ ಕೈದಿಗಳ ಕವಿತೆಗಳನ್ನು ಸಂಗ್ರಹಿಸಬೇಕು, ಆ ಕಾವ್ಯದ ಆಳಕ್ಕೆ ಇಳಿಯಬೇಕೆಂದು ಅನಿಸುತ್ತಿತ್ತು. ತಾತ್ಯಾಸಾಹೇಬರ ಸ್ಫೂರ್ತಿ ಮತ್ತು ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳಿಯವರ ಸಹಕಾರದಿಂದ ಈ ಕಾರ್ಯ ಚಾಲನೆ ಪಡೆಯಿತು. ಇಂದೂರಿನಲ್ಲಿ ಜರುಗಿದ ಅಖಿಲ ಭಾರತೀಯ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳಿಯ ಅಧ್ಯಕ್ಷ ಪ್ರಾಚಾರ್ಯ ರಾ. ರಂ. ಬೋರಾಡೆಯವರು ಈ ಪ್ರಾತಿನಿಧಿಕ ಕವನ ಸಂಕಲನದ ಪ್ರಕಟಣೆಯನ್ನು ಮಂಡಳಿ ಮಾಡುವುದೆಂದು ಬಹಿರಂಗವಾಗಿ ಪ್ರಕಟಿಸಿದರು. ಆದರೊಟ್ಟಿಗೆ ಕವನ ಸಂಕಲನದ ಸಂಪಾದಕತ್ವದ ಸಾರಥ್ಯವನ್ನು ನಾನೇ ವಹಿಸಬೇಕೆಂದು ಪ್ರೀತಿಯ ಆದೇಶವಿತ್ತರು. ಒಟ್ಟಾರೆ ಈ ಕಾರ್ಯಕ್ಕೆ ಆರಂಭ ಸಿಕ್ಕಿತು. ಮಹಾರಾಷ್ಟ್ರ ರಾಜ್ಯದೊಳಗಿನ ಎಲ್ಲ ಕಾರಾಗೃಹಗಳ ಕೈದಿಗಳಿಗೆ ಪತ್ರ ಬರೆಯಲಾಯಿತು. ಬಹಳಷ್ಟು ಜನರು ಉತ್ಸಾಹದಿಂದ ಕವಿತೆ ಕಳಿಸಿದರು. ಹಲವರು ಕತೆ, ಕಾದಂಬರಿ, ಏಕಾಂಕಗಳನ್ನೂ ಕಳಿಸಿದರು. ಮರಾಠಿಯೇತರ ಕೈದಿಗಳು ಹಿಂದಿ ಭಾಷೆಯಲ್ಲಿ ಬರೆದು ಕಳಿಸಿದರು. ಜೈಲಿನೊಳಗೂ ಸಾಹಿತ್ಯ ಎಷ್ಟು ಸಮೃದ್ಧವಾಗಿದೆ ಎಂಬುದಕ್ಕೆ ಈ ಪ್ರಚಂಡ ಪ್ರತಿಕ್ರಿಯೆಗಳೇ ಸಾಕ್ಷಿ. ಕವನ ಸಂಕಲನ ಒಂದು ರೂಪ ಪಡೆಯಿತು.

ನಾಶಿಕದ ಜೈಲಿಗೆ ಹೋಗಿ ಕೈದಿಗಳ ಅಭಿವೃದ್ಧಿಗಾಗಿ ಭಿನ್ನ ಭಿನ್ನ ಯೋಜನೆಗಳನ್ನು ಜಾರಿಗೆ ತರುವ ಸರೋಜ ದಾಯಮಾ, ಮುಕ್ತೇಶ್ವರ ಮುನಶೆಟ್ಟಿವಾರ ಹಾಗೆಯೆ ಕೈದಿಗಳಾದ ಶಿವಾಜಿ ಸಾಳುಂಕೆ, ಹಿತೇಶ ಶಹಾ ಮುಂತಾದವರ ಕವನಗಳು ಲಭ್ಯವಾಗುವಲ್ಲಿ ಒಳ್ಳೆಯ ಸಹಕಾರ ದೊರೆಯಿತು. ನಾಶಿಕದ್ದೇ ಸಾಮಾಜಿಕ ಅಭಿಸರಣ ಎಂಬ ಸಂಸ್ಥೆಯು ಕಳೆದ ಕೆಲವು ವರುಷಗಳಿಂದ ಕೈದಿ ಬಂಧುಗಳ ಅಭಿವೃದ್ಧಿಗೆ ಬೇರೆ ಬೇರೆ ಯೋಜನೆ ಹಾಕಿಕೊಂಡಿದೆ. ಈ ಕವನ ಸಂಕಲನಕ್ಕೂ ಅವರ ಕ್ರಿಯಾತ್ಮಕ ಶುಭಾಶಯ ಮಹತ್ವದ್ದಾಗಿದೆ. ರಾಜಕುಮಾರ ಗುಪ್ತಾ ಇವರಂತೂ ಕಳೆದ ಹಲವು ವರ್ಷಗಳಿಂದ ಜೈಲಿನಲ್ಲಿದ್ದೂ ನನ್ನ ಪರಿಚಯ ಇಟ್ಟುಕೊಂಡಿದ್ದಾರೆ. ಜೈಲು ವಿಭಾಗದ ಉಪ ಮಹಾನಿರೀಕ್ಷಕ ಧನಾಜಿರಾವ ಚೌಧರಿ, ದೇ. ನಾ. ದವಣೆ, ಗೆಳೆಯ ಆರ್. ಜೆ. ಡೋಳಸ ಮುಂತಾದವರ ಸಹಕಾರ ಕಾರ್ಯಕ್ಕೆ ಕಳೆಕೊಟ್ಟಿತು. ಎಲ್ಲ ಕೈದಿಗಳ ಕವಿತೆಗಳು ನನಗೆ ತಲುಪದೇ ಇರಬಹುದು. ಪ್ರಯತ್ನದ ಕೊನೆಗಳಿಗೆ ತನಕ ಲಭ್ಯವಾದ ಕವನಗಳು ಈ ಸಂಕಲನದಲ್ಲಿವೆ. ಮತ್ತೆ ಮತ್ತೆ ಈ ಬಗೆ ಪ್ರಯತ್ನ ಸಾಗಿದರೆ ಜೈಲಿನ ಕವಿತೆಗಳ ಕುರಿತು, ಅದರ ಮೌಲಿಕ ಆಶಯ ಬಗೆಗೆ ಹೊರಗಿನ ಸಮಾಜಕ್ಕೆ ಆಕರ್ಷಣೆ, ಒಲವು ಮೂಡಬಹುದು. ಕವಿತೆಯಂತೆ ಅನ್ಯ ಪ್ರಕಾರದ ಸಾಹಿತ್ಯವು ಬೆಳಕು ಕಾಣಬೇಕಿದೆ. ಗುನ್ಹೆಯಿಂದ ಒಬ್ಬ ಮನುಷ್ಯ ಕೈದಿಯೆನಿಸಿಕೊಂಡರೂ ಆತ ಮೂಲತಃ ಮನುಷ್ಯನಾಗಿದ್ದಾನೆ.

ಕೈದಿಯಾಗಿರುವುದು ಜೀವನದ ಒಂದು ಪುಟ್ಟ ಭಾಗವಾಗಿದೆ. ಕೈದಿಯೊಳಗಿನ ಮಾನವನನ್ನು ಅರಿತುಕೊಳ್ಳುವುದಕ್ಕಾಗಿ ಸಾಹಿತ್ಯ ಒಂದು ಪ್ರಭಾವಿ ಮಾಧ್ಯಮವಾಗುತ್ತದೆ. ಈ ಮಾಧ್ಯಮದತ್ತ ಸಮಾಜವು ಒಪ್ಪಿ ಕರುಳಿಂದ ಮತ್ತು ಕರುಣೆಯ ಕಣ್ಣಿಂದ ನೋಡುವ ಅಗತ್ಯವಿದೆ. ಬಿರುಕುಗೊಂಡ ಮನಸ್ಸಿನ ಈ ಕವಿತೆಗಳನ್ನು ಓದುಗರು ಅಗತ್ಯವಾಗಿ ಓದಬೇಕು. ಅಪಘಾತ ಘಟಿಸಿಯೋ, ಅನ್ಯ ಕಾರಣ ನಿಮಿತ್ತವೋ ಕೈದಿಗಳಾದವರಿಗೆ ಒಳ್ಳೆಯ ಮನುಷ್ಯನಾಗಲು ಅವಕಾಶ, ಶಕ್ತಿ ನೀಡಬೇಕೆಂದು ನಾನು ವಿನಂತಿಸುವೆ.

ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳಿ ವಿಭಿನ್ನ ದಾರಿಯಲ್ಲಿ ಸಾಗಿ ಸರಳುಗಳ ಮರೆಯ ಭಾವವಿಶ್ವವನ್ನು ಕಾವ್ಯದ ಮೂಲಕ ಸಮಾಜದೆದುರು ಇರಿಸಿದುದಕ್ಕೆ ಧನ್ಯವಾದಗಳು ! ತಾತ್ಯಾಸಾಹೇಬರ ಈ ಕನಸು ಅವರು ನಮ್ಮೊಂದಿಗಿಲ್ಲದ ಕಾಲದಲ್ಲಿ ನನಸಾಗುತ್ತಿರುವುದು; ಆ ಅವಕಾಶ ನನಗೆ ಒದಗಿರುವುದು ಖರೇ ಅರ್ಥದಲ್ಲಿ ಅವರಿಗೆ ನೀಡುವ ಆದರಾಂಜಲಿಯಾಗಿದೆ ಎಂದು ನನಗನಿಸುತ್ತದೆ. ಈ ತರದ ಭಿನ್ನ ಶ್ರದ್ಧಾಂಜಲಿ ಅರ್ಪಿಸುವಾಗ ಸ್ವಂತಕ್ಕೆ ಧನ್ಯತೆಯೆನಿಸುತ್ತಿದೆ. ಕವಿತೆಗಳನ್ನು ಸಂಗ್ರಹಿಸುವಾಗ ವಿಜಯಕುಮಾರ ಇಂಗಳೆಯವರು ನೀಡಿದ ಸಹಾಯವನ್ನು ನೆನೆಯುತ್ತೇನೆ.

- ಉತ್ತಮ ಕಾಂಬಳೆ

# ಕತ್ತಲು ಗೋಡೆಯ ಪಿಸುಮಾತು ಆಲಿಸಿದಾಗ...

ಭಾರತೀಯ ಭಾಷೆಗಳಲ್ಲಿಯೇ ಬಹುಶಃ ಮೊದಲಬಾರಿಗೆ ಸಾಮಾನ್ಯ ಕೈದಿಗಳ ಕವಿತೆಗಳು ಸಂಗ್ರಹರೂಪ ಪಡೆದದ್ದು ಮರಾಠಿಯಲ್ಲಿ. ಅವುಗಳು ಇಲ್ಲಿ ಕನ್ನಡ ರೂಪದಲ್ಲಿ ಬೆಳಕು ಕಾಣುತ್ತಿರುವುದು ಸಹ ಕನ್ನಡದ ಮಟ್ಟಿಗೆಯೂ ಪ್ರಥಮ ಯತ್ನವೇ ಸರಿ. ಆದರೆ ಕನ್ನಡ ರಂಗಭೂಮಿಗೂ ಕೈದಿಗಳಿಗೂ ನಂಟನ್ನು ಕಲ್ಪಿಸಲಾಗಿದೆ. ರಂಗಾಯಣದ ಪ್ರತಿಭೆ ಹುಲಿಗೆಪ್ಪ ಕಟ್ಟೀಮನಿ ಕರ್ನಾಟಕದ ವಿವಿಧ ಜೈಲುಗಳಲ್ಲಿ ಕೈದಿಗಳನ್ನು ಸೇರಿಸಿ ಯಶಸ್ವಿ ನಾಟಕಗಳನ್ನು ನೀಡಿದ್ದಾರೆ. ಅವರ ಆ ಪ್ರಯತ್ನ ಈಗಲೂ ನಡೆಯುತ್ತಿದೆ. ಆದರೆ ಅನುವಾದದ ಈ ಕವಿತೆಗಳ ಮೂಲಕ ಜನಸಾಮಾನ್ಯ ವರ್ಗದ ಅಪರಾಧಿಗಳ ಭಾವ ವಿಶ್ವ, ಕತ್ತಲು ಜಗತ್ತಿನ ನೋವು, ಹತಾಶೆ, ಚಡಪಡಿಕೆಗಳು ಕನ್ನಡಕ್ಕೆ ಹೊಸ ಸೇರ್ಪಡೆಯೆ ಆಗಿದೆ. ಜನಪರವಾದ ಈ ಕಾರ್ಯ ನನ್ನಿಂದ ಸಾಧ್ಯವಾದುದು ಅದು ನನ್ನ ಭಾಗ್ಯವೆಂದು ಭಾವಿಸಿದ್ದೇನೆ.

'ಗಜಾ ಆಡಚ್ಯಾ ಕವಿತಾ' ಕುರಿತು ಕೇಳಿ ಪಡೆದು ಓದಿದ್ದೆ. ಅದನ್ನು ಕನ್ನಡಕ್ಕೆ ತರುವ ಆಲೋಚನೆಯಲ್ಲಿರುವಾಗಲೇ ಅದರ ಸಂಪಾದಕ ಮತ್ತು ಪ್ರಸಿದ್ಧ ಮರಾಠಿ ದಲಿತ ಕವಿ ಉತ್ತಮ ಕಾಂಬಳೆ ಬೆಳಗಾವಿಗೆ ಬರುತ್ತಿದ್ದಾರೆಂಬ ವಿಚಾರವನ್ನು ಇಲ್ಲಿಯ ಮರಾಠಿ ಸಾಹಿತಿ ಮಿತ್ರ ಡಾ. ವಿನೋದ ಗಾಯಕವಾಡ ತಿಳಿಸಿದರು. ಸರಿ, ಉತ್ತಮ ಕಾಂಬಳೆಯವರ ಹೆಸರನ್ನು, ಸಾಹಿತ್ಯವನ್ನು ಬಲ್ಲವನಾಗಿದ್ದೆ. ಅವರೂ ಕೂಡ ಕರ್ನಾಟಕದವರೇ. ಅಥಣಿ ತಾಲ್ಲೂಕಿನ ಶಿರಗುಪ್ಪಿಯವರು. ಇಲ್ಲಿ ಬಂದಾಗ ಒಂದೇ ಭೇಟಿಯಲ್ಲಿ ತುಂಬಾ ಆತ್ಮೀಯರಾದರು. ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳಿ ಕವನ ಸಂಕಲನ ಪ್ರಕಟಿಸಿರುವುದರಿಂದ ಹಕ್ಕು ಅವರ ಬಳಿಯಿತ್ತು. ಅದನ್ನು ಕೊಡಿಸುವ ಜವಾಬ್ದಾರಿ ಹೊತ್ತು ತಕ್ಷಣ ಆ ಕೆಲಸ ಮಾಡಿಯೇ ಬಿಟ್ಟರು. ನನ್ನ ಅನುವಾದ ಕಾರ್ಯ ನಡೆದಿತ್ತು. ಅನುಮತಿ ಪತ್ರ ಬಂದೊಡನೆ ಕೆಲ ಕವಿತೆಗಳನ್ನು ಪತ್ರಿಕೆಗಳಿಗೆ ಕಳಿಸಿದೆ. 'ಮಯೂರ' ಮಾಸಿಕದಲ್ಲಿ ಐದು ಕವಿತೆಗಳು, 'ವಿಜಯ ಕರ್ನಾಟಕ' ದಲ್ಲಿ ಎರಡು ಕವಿತೆಗಳು, 'ಹೊಸತು' ವಿನಲ್ಲಿ ನಾಲ್ಕು ಪದ್ಯಗಳು ಹಾಗೂ 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಯ ಮುಖಪುಟದಲ್ಲಿ ಎರಡು ಕವಿತೆಗಳೊಂದಿಗೆ ಈ ಕುರಿತ ಲೇಖನವೂ ಪ್ರಕಟಗೊಂಡಾಗ ಅವುಗಳಿಗೆ ಬಂದ ಪ್ರತಿಕ್ರಿಯೆ ದಂಗುಬಡಿಸುವಂತಿತ್ತು. ಈ ಹೊಸ ಪ್ರಯತ್ನಕ್ಕೆ ಸ್ವಾಗತ ಸಿಕ್ಕಿತು. ಕನ್ನಡಕ್ಕೆ

ತರಲು ಅನುಮತಿ ನೀಡಿದ ಮಹಾರಾಷ್ಟ್ರ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಮಂಡಳಿಯ ಅಧ್ಯಕ್ಷರಾದ ಡಾ. ರಂ. ಬೋರಾಡೆ ಅವರಿಗೆ, ಈ ಸಂಸ್ಥೆಯ ಸದಸ್ಯ ಮತ್ತು ' ಗಜಾ ಆಡಚ್ಯಾ ಕವಿತಾ ' ಸಂಕಲನದ ಸಂಪಾದಕ ಹಾಗೂ ಮಿತ್ರ ಉತ್ತಮ ಕಾಂಬಳೆಯವರ ಸಹಕಾರಕ್ಕೆ ಕೃತಜ್ಞನಾಗಿದ್ದೇನೆ.

ಕಾವ್ಯಾನುವಾದ ನನಗೆ ಹೊಸದು. ಮೂಲ ಆಶಯ, ಕಾವ್ಯದ ಸೌಂದರ್ಯ, ಲಯಗಳಿಗೆ ಧಕ್ಕೆಯಾಗದಂತೆ ಅನುವಾದಿಸಲು ಯತ್ನಿಸಿದ್ದೇನೆ. ಈ ನನ್ನ ಪ್ರಯತ್ನದಲ್ಲಿ ಸಹಾಯ, ಸಹಕಾರ ನೀಡಿದ ಮರಾಠಿ ಸಾಹಿತಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಸ್ನಾತಕೋತ್ತರ ಕೇಂದ್ರ ಬೆಳಗಾವಿಯ ಮರಾಠಿ ವಿಭಾಗದ ಮುಖ್ಯಸ್ಥ ಡಾ. ವಿನೋದ ಗಾಯಕವಾಡರ ನೆರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ನನ್ನ ಗುರುಗಳು, ಕನ್ನಡಕ್ಕೆ ಮರಾಠಿಯ ಶ್ರೇಷ್ಠ ಕೃತಿಗಳನ್ನು ತಂದುಕೊಟ್ಟ ಚಂದ್ರಕಾಂತ ಪೋಕಳೆ ಹಾಗೂ ಕವಿ ಗೆಳೆಯ, ಇಲ್ಲಿಯ ಕನ್ನಡಪ್ರಭದ ಉಪ ಸಂಪಾದಕ ತುರುವೀಹಾಳ ಚಂದ್ರು ಅವರಿಗೆ ಹಾರ್ದಿಕ ಕೃತಜ್ಞತೆಗಳು. ಇವರಿಬ್ಬರೂ ಕಾವ್ಯ ವಾಚನದಲ್ಲಿ ಪಾಲ್ಗೊಂಡು ತಮ್ಮ ಮೌಲಿಕ ಸಮಯವನ್ನು ನನ್ನೊಂದಿಗೆ ಹಂಚಿಕೊಂಡು ಎರಡು ಒಳ್ಳೆಯ ಮಾತು ಆಡಿದ್ದಾರೆ.

ರಾಜಕಾರಣ ಮತ್ತು ಸಾಂಸ್ಕೃತಿಕ ಲೋಕದ ಸೇತುವೆಯಂತಿರುವ ಹಿರಿಯ ಚಿಂತಕ, ಸಾಹಿತಿ ಎಂ. ಪಿ. ಪ್ರಕಾಶ ಅವರ ಪ್ರೋತ್ಸಾಹಕ್ಕೆ ಆಭಾರಿ.

ಮುಖಪುಟ ರಚಿಸಿದ ಹೆಸರಾಂತ ಕಲಾವಿದ ಚಂದ್ರನಾಥ ಆಚಾರ್ಯರಿಗೆ ಕೃತಜ್ಞತೆ.

ಹಿರಿಯ ವಿದ್ವಾಂಸರಾದ ಡಾ. ಗುರುಲಿಂಗ ಕಾಪಸೆ ಅವರಿಗೆ, ಆತ್ಮೀಯ ಗೆಳೆಯ ಡಾ. ಸರಜೂ ಕಾಟ್ಕರ್, ಅಶರೀರ ವಾಣಿಯ ಮೂಲಕ ವಾರದಲ್ಲಿ ಒಂದೆರಡು ಬಾರಿಯಾದರೂ ಪ್ರೀತಿ-ಸ್ನೇಹ ಹಂಚಿಕೊಳ್ಳುವ ಆತ್ಮೀಯ ಗೆಳೆಯ ಪ್ರಹ್ಲಾದ ಅಗಸನಕಟ್ಟೆ, ಕಂನಾಡಿಗಾ ನಾರಾಯಣ, ಬಾಳಾಸಾಹೇಬ ಲೋಕಾಪುರ, ಬಂದಗದ್ದೆ ರಾಧಾಕೃಷ್ಣ ಅವರಿಗೆ ಧನ್ಯವಾದಗಳು. ಕವಿತೆ ಪ್ರಕಟಿಸಿದ 'ಮಯೂರ ', 'ವಿಜಯ ಕರ್ನಾಟಕ', 'ಹೊಸತು', 'ಪ್ರಜಾವಾಣಿ', ಪತ್ರಿಕೆಯ ಸಂಪಾದಕರಿಗೆ, ಕೈದಿ ಕವಿತೆ ಓದಿ ಮೆಚ್ಚುಗೆಯ ಪ್ರತಿಕ್ರಿಯೆ ನೀಡಿದ ಓದುಗರಿಗೂ ಕೃತಜ್ಞನಾಗಿದ್ದೇನೆ.

ಈ ಸಂಕಲನ ಹೊರತರಲು ಒಪ್ಪಿ ಅಭಿನಂದನೀಯ ಕಾರ್ಯಕ್ಕೆ ಮುಂದಾದ ಹಿರಿಯ ಮಿತ್ರರಾದ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಎಲ್ಲಾ ಸದಸ್ಯರಿಗೆ, ಆಡಳಿತಾಧಿಕಾರಿ ಎನ್. ಶಿವಸ್ವಾಮಿ ಅವರಿಗೂ ತುಂಬು ಹೃದಯದಿಂದ ಕೃತಜ್ಞತೆ ಅರ್ಪಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರವು ಕತ್ತಲು ಲೋಕದ ಬರಾಕಿನಲ್ಲಿ ಬದುಕುವ ಜನರ ನೋವಿನ ಬಿಸಿಯುಸಿರಿಗೆ, ಕಣ್ಣೀರಿಗೆ, ಪಿಸುಮಾತಿಗೆ

ಸ್ಪಂದಿಸಿದ್ದು ಐತಿಹಾಸಿಕ ಕಾರ್ಯಸಾಧನೆಯಾಗಿದೆಯೆಂದು ನಾನು ನಂಬಿದ್ದೇನೆ.

ತನ್ನ ಕಾರ್ಯ ನಿಮಿತ್ತ ಎಲ್ಲೋ ಇದ್ದರೂ ನನ್ನ ಮನದಲ್ಲಿ ಸ್ನೇಹದ ಸೌಧ ನಿರ್ಮಿಸಿ ವಿರಾಜಮಾನರಾದ, ರೈತ ಹಾಗೂ ಬಹುಜನ ಸಮುದಾಯದ ಕಾಳಜಿಯ ಮಿತ್ರ, ಪರಶುರಾಮೇಗೌಡರ ನಿಷ್ಕಾಮ ಪ್ರೀತಿ -ಸ್ನೇಹಕ್ಕೆ ಈ ಕೃತಿಯನ್ನು ಸಮರ್ಪಿಸುತ್ತಿದ್ದೇನೆ.

ಬೆನ್ನುಡಿ ಬರೆದ ಕವಿ, ಹಿರಿಯ ಮಿತ್ರ ಚಂದ್ರಶೇಖರ ತಾಳ್ಯ ಅವರಿಗೆ, ಅಂದವಾಗಿ ಮುದ್ರಿಸಿದ ಸಿಬ್ಬಂದಿಗೆ ನನ್ನ ಧನ್ಯವಾದಗಳು.

ಗೆಳೆಯ ಶಿವಪ್ಪ ದಳವಾಯಿ, ಮಡದಿ ಅನುಪಮ, ಕರುಳು ಕಂದಮ್ಮಗಳಾದ ಊಲಿ (ವಿನುತ) ಶ್ರೇಯರಿಗೆ ನೆನಕೆಗಳು

ಬೆಳಗಾವಿ

ದಿ : 17-10-2003

- ಡಿ. ಎಸ್. ಚೌಗಲೆ

# ಪರಿವಿಡಿ


*ಅಕ್ಷರ ಸೂರ್ಯನಿಗೆ ನಮನ* v
*ಡಾ. ರಾ. ಬೋರಾಡೆ ಅವರ ಮಾತು* ix
*ಸರಳುಗಳ ಹಿಂದಿರುವ ಹೃದಯದಲ್ಲಿ ಇಣುಕಿದಾಗ* xiii
*ಕತ್ತಲುಗೋಡೆಯ ಪಿಸುಮಾತು ಆಲಿಸಿದಾಗ* xxix

| | | | |
|---|---|---|---|
| ೧. | ಯಾತ್ರಿಕ | ಹಿತೇಶ ಶಹಾ | ೧ |
| ೨. | ಕುರುಡ | ಹಿತೇಶ ಶಹಾ | ೨ |
| ೩. | ಹೇಳು ದೇವರೆ ಹೇಳು | ರಮೇಶ ಬಾಬುರಾವ ಖಾಡೆ | ೩ |
| ೪. | ವಿದಾಯ | ರಮೇಶ ಬಾಬುರಾವ ಖಾಡೆ | ೫ |
| ೫. | ಕ್ಷಣಹೊತ್ತು | ಭ.ಲ. ಬಿರಾದಾರ | ೭ |
| ೬. | ನನ್ನ ಊರು | ಭ.ಲ. ಬಿರಾದಾರ | ೭ |
| ೭. | ಇತಿಹಾಸ | ರಿಯಾಝು ಬಾದಶಹಾ ಮುಲ್ಲಾ | ೯ |
| ೮. | ದೇವರೆ ನೀನೆಲ್ಲಿರುವೆ? | ರಿಯಾಝು ಬಾದಶಹಾ ಮುಲ್ಲಾ | ೧೦ |
| ೯. | ಯಾಕೆ ಬಂದೆ? | ಅನಿಲ ಸುಭಾಷರಾವ ವೈದ್ಯ | ೧೧ |
| ೧೦. | ದಿಕ್ಕಿಲ್ಲದ ಗಿಳಿ | ಸಂತೋಷ ಸಟವಾಜಿ ಸಸಾಣೆ | ೧೩ |
| ೧೧. | ಅವ್ವನ ನೆರಳು | ಸಂತೋಷ ಸಟವಾಜಿ ಸಸಾಣೆ | ೧೪ |
| ೧೨. | ಅವ್ವ | ಅನಿಲ ಸುಭಾಷರಾವ ವೈದ್ಯ | ೧೫ |
| ೧೩. | ವನವಾಸ | ಮನೋಹರ ರಣಪಿಸೆ | ೧೭ |
| ೧೪. | ಕಳಂಕ | ಪ್ರಕಾಶ ತುಕಾರಾಮ ಕದಮ್ | ೧೮ |
| ೧೫. | ಜೀವಾವಧಿ ಶಿಕ್ಷೆ | ರವೀಂದ್ರ, ಸಂತೋಷ ಬನಸೋಡೆ | ೧೯ |
| ೧೬. | ಅವ್ವ | ದತ್ತಾ ಪಾಟೀಲ - ರಹಾಣೆ | ೨೦ |
| ೧೭. | ಜೈಲು | ದತ್ತಾ ಪಾಟೀಲ - ರಹಾಣೆ | ೨೨ |
| ೧೮. | ಇಲ್ಲಿ | ಫಿಲೀಪ್ ಭೀಮರಾವ ಶಿರಸಾಠ | ೨೪ |

| | | | |
|---|---|---|---|
| ೧೯. | ಜೈಲಿನ ಗೋಡೆ | ಫಿಲೀಪ್ ಭೀಮರಾವ ಶಿರಸಾಠ | ೨೫ |
| ೨೦. | ಅವ್ವ | ಸದಾಶಿವ ಯಾದವ ಗಾಯಕವಾಡ | ೨೬ |
| ೨೧. | ಮೊರೆ | ಸದಾಶಿವ ಯಾದವ ಗಾಯಕವಾಡ | ೨೭ |
| ೨೨. | ನಮನ ತಾಯಿ ಭಾರತಿಗೆ | ಪರಮೇಶ್ವರ ನಾನಾ ಸಾಬಳೆ | ೨೮ |
| ೨೩. | ಏಕತೆಯ ಭಾರತ ಬೆಳಗಲಿ | ರಾಮಜಿ ಧರ್ಮಾಜಿ ದುಧಮಲ | ೨೯ |
| ೨೪. | ಗುಣದ ಸಖಿ ಸಖಿಯರಿ | ರಾಮಜಿ ಧರ್ಮಾಜಿ ದುಧಮಲ | ೩೦ |
| ೨೫. | ಯಾತನೆಯ ಮೃಗಜಲ | ರವೀಂದ್ರ ಕೇವಳ ಬಚ್ಛಾವ | ೩೧ |
| ೨೬. | ರೆಂಬೆ ಮತ್ತು ಹೂವು | ರವೀಂದ್ರ ಕೇವಳ ಬಚ್ಛಾವ | ೩೨ |
| ೨೭. | ನಿನ್ನ ನೆನಪು | ಫುಲಚಂದ ಚಂದ್ರಭಾನ ಥಾಕಣೆ | ೩೩ |
| ೨೮. | ತಳಮಳ | ಫುಲಚಂದ ಚಂದ್ರಭಾನ ಥಾಕಣೆ | ೩೪ |
| ೨೯. | ನೆನಪು | ನರೇಶ ಚರಣಸಿಂಗ ರಾಠೋಡ | ೩೫ |
| ೩೦. | ಕುಂಟು ನೆಪ | ನರೇಶ ಚರಣಸಿಂಗ ರಾಠೋಡ | ೩೬ |
| ೩೧. | ಸಹಜ | ಶಿವಾಜಿ ದತ್ತು ಪಾಟೀಲ | ೩೭ |
| ೩೨. | ಒಂದೇ ತಪ್ಪಿನಿಂದ | ಪ್ರಕಾಶ ತುಳಸಿರಾಮ ಪಂಡಿತ | ೩೮ |
| ೩೩. | ಜೀವನದ ಅರ್ಥ | ಪ್ರಕಾಶ ತುಳಸಿರಾಮ ಪಂಡಿತ | ೩೯ |
| ೩೪. | ಜೈಲಿನ ಪತ್ರ | ಶಿವಾಜಿ ವೇಡೂ ಸಾಳುಂಕೆ | ೪೦ |
| ೩೫. | ಸೈರನ್... ಜೈಲಿನದು... | ಶಿವಾಜಿ ಸಾಳುಂಕೆ | ೪೩ |
| ೩೬. | ನಾವಿಲ್ಲಿ | ಶಿವಾಜಿ ಸಾಳುಂಕೆ | ೪೫ |
| ೩೭. | ಹೋಲಿಕೆ | ದಿನೇಶ ಮೋಹನ ಪವಾರ | ೪೬ |
| ೩೮. | ಪ್ರೀತಿ | ದಿನೇಶ ಮೋಹನ ಪವಾರ | ೪೭ |
| ೩೯. | ರಕ್ಷಾ ಬಂಧನ | ಪರಶುರಾಮ ಉಮಾ ಮೆರಂಡೆ | ೪೮ |
| ೪೦. | ಜೀವನ ಗಾಥೆ | ಪರಶುರಾಮ ಉಮಾ ಮೆರಂಡೆ | ೪೯ |

# ಯಾತ್ರಿಕ

ಋತು ಬದಲಾದೊಡನೆಯೆ ಸ್ವರಕ್ಷಣೆಗೆ
ಸ್ಥಳಾಂತರಗೊಳ್ಳುವ ಹಕ್ಕಿ ಸಂಕುಲಕೆ
ಯಾತ್ರಿಕ ಅಂತಾರಲ್ಲ !
ಮನುಷ್ಯನಂತೂ ಅಂತರಾಳದೊಳಗೆಲ್ಲೋ
ಎಷ್ಟು ಸಾರೆ ಯಾತ್ರೆ ನಡೆಸುತ್ತಾನೆ ?
ಲಾಲಸೆಯಿಂದೊಮ್ಮೆ
ಶ್ರದ್ಧೆಯಂತ ಇನ್ನೊಮ್ಮೆ
ಒಮ್ಮೊಮ್ಮೆ ಕ್ರೋಧದಿಂದ
ಎಂದಾದರೊಮ್ಮೆ ರಾಕ್ಷಸನಾಗಲು
ಒಂದೊಂದು ಸರತಿ ದೇವರಾಗಲು
ಯಾವತ್ತೂ ಅಂತರವನ್ನು ಕಿರಿದುಗೊಳಿಸುತ್ತಿರುತ್ತಾನೆ.

- ಹಿತೇಶ ಶಹಾ

ಮಧ್ಯವರ್ತಿ ಕಾರಾಗೃಹ, ನಾಶಿಕ ರಸ್ತೆ

# ಕುರುಡ

ಕಟ್ಟ ಕರಿಗಲ್ಲಿನ
ಗೋಡೆಯಲ್ಲಿ ಹುದುಗಿಕೊಂಡ ಮನುಷ್ಯನ
ಬಳಿಯಿರೋದು
ಸೀಮಿತ ದೃಷ್ಟಿ
ಸೀಮಿತ ವಿಚಾರಧಾರೆ
ಕುರುಡುಗಣ್ಣು ಪಿಳಿಪಿಳಿಸುವಂತೆ
ತೆರೆವ ಬಾಗಿಲು
ಅದರೊಳಗಿಂದ ತೂರಿ ಒಳಬರುವವು
ಅವೇ ಅವೇ ದಿಗ್ಭ್ರಮೆಗೊಳಿಸೋ ವಿಚಾರಗಳು
ಕುರುಡ ವ್ಯಕ್ತಿಯದ್ದೂ ಸಹ
ಹಾಗೆಯೇ ಇರೋದಿಲ್ಲವೆ ?
ಪ್ರಪಂಚದೊಳಗಿದ್ದೂ ಕೂಡ
ಏಕಾಂಗಿ, ಒಬ್ಬಂಟಿ
ಸೀಮಿತ ದೃಷ್ಟಿ, ಸೀಮಿತ ಅರಿವು
ಮತ್ತು ವಿಚಾರಧಾರೆಯುಳ್ಳ ಒಬ್ಬ ಕುರುಡ

- ಹಿತೇಶ ಶಹಾ

ಮಧ್ಯವರ್ತಿ ಕಾರಾಗೃಹ, ನಾಶಿಕ ರಸ್ತೆ

# ಹೇಳು ದೇವರೆ ಹೇಳು

ನಿರಂತರ ಬಂಧನದಲಿ
ಇಡೀ ಬದುಕನ್ನು ಕಳೆಯುವುದು
ಕಣ್ಣೊಳಗಿನ ನೀರು
ಧಾರಾಕಾರ ಹರಿಯುವುದು
ಹನಿ ಹನಿ ಇಂಗಿ
ಬದುಕು ಗದ್ದದಿತವಾಗುವುದು
ಕರುಳ ಬಳ್ಳಿ ಸಂಬಂಧ ಎಲ್ಲವನ್ನೂ
ಇಲ್ಲಿಯೇ ಮರೆತು ಹೋಗುವುದು
ಕೇವಲ ಬರೀ ಕೇವಲ
ಬಾನನ್ನೇ ದಿಟ್ಟಿಸುವುದು

ನಿಸ್ಸೀಮ ದುಃಖದ ಬೆಟ್ಟವೇ
ಹೇಳು, ಅದ್ಹೇಗೆ ಗೆಲ್ಲೋದು ?
ಬದುಕಿನ ಹೊಂಡಗಳನ್ನೇನು
ಕಲ್ಲು ಮಣ್ಣಿಂದ ತುಂಬೋದೆ ?
ಕೇವಲ ಬರೀ ಕೇವಲ
ಬಾನನ್ನೇ ದಿಟ್ಟಿಸುವುದು

ಅಪರಾಧಿ - ನಿರಪರಾಧಿ
ಹೇಗೆಂದು ನಿನಗೆ ಹೇಳೋದು ?
ಕೇಳಿಯೂ ಕೇಳಿಸದಂತೆಯೆ
ಅದೆಷ್ಟು ಬಾರಿ ಹೇಳೋದು
ಇರುಳ ಗಸ್ತು
ಹಗಲ ಯಾತನೆ

ಹೇಳು ದೇವರೆ, ಹೇಳು
ಎಷ್ಟು ದಿನಾಂತ ಭೋಗಿಸೋದು ?
ಕೇವಲ ಬರೀ ಕೇವಲ
ಬಾನನ್ನೇ ದಿಟ್ಟಿಸುವುದು !

- ರಮೇಶ ಬಾಬುರಾವ ಖಾಡೆ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

## ವಿದಾಯ

ತೊರೆದು ನನ್ನ ಹೃದಯ
ಕಟ್ಟಿದೆ ಗೂಡೊಂದನ್ನು
ಹೂಡಿದೆ ಅಲ್ಲಿ ಸಂಸಾರವನ್ನು
ಸಂತಸದಿಂದ....

ನೀ ತನ್ಮಯಳಾದೆ
ನಿನ್ನದೇ ಛಾಯೆಯೊಳಗೆ
ನನ್ನ ಕಾಯವ
ಕಾಣದೆ.....

ಭಗ್ನಗೊಳಿಸಿದೆ ಮನವನು
ನೀ ಕಂಡು
ಬೆಸೆದೆ ಸಂಬಂಧಗಳನು
ಕಾಣದೆ...

ಒಂದೇ ಕ್ಷಣದಲಿ ತಬ್ಬಲಿಗೊಳಿಸಿದೆ
ಪ್ರೇಮದ ಹಾದಿಯಲಿ
ಹೆಜ್ಜೆಗಳ ಮೂಡಿಸುತ್ತ...

ನೀನೆಷ್ಟು ದೂರ ಸರಿದೆಯೆಂದರೆ, ಗೊತ್ತಾಗಲೇ ಇಲ್ಲ
ನನ್ನ ನಿನ್ನ ಪ್ರೇಮಕ್ಕೆ
ವಿದಾಯ ಎಂದಾಯಿತು
ತಿಳಿಯಲೇ ಇಲ್ಲ....

- ರಮೇಶ ಬಾಬುರಾವ ಖಾಡೆ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ್

# ಕ್ಷಣಹೊತ್ತು

ಕಣ್ಣು ಮುಚ್ಚಿ ಕನಸು ಕಾಣುವಾಗ
ಕಾಣುವವು ಎಲ್ಲ ಸಂಬಂಧಗಳೀಗ
ಮನೆ ಮಾಡಿವೆ
ಸುಖ - ಶಾಂತಿ - ಸೌಖ್ಯ
ಗಾಳಿಸಂಗ ತನ್ಮಯಗೊಂಡ ಮನ
ಕ್ಷಣಹೊತ್ತು ಕಣ್ಣುಮುಚ್ಚಿ ಕನಸು ಕಾಣುವಾಗ,

ಕಣ್ಣು ತೆರೆದರೆ ಎಲ್ಲವು ಎದುರು
ಕೈದಿ ಬಂಧುಗಳು, ಒಳಗಿನ ಪಹರೆ
ಈ ಮನವು ಬೆಚ್ಚಿ ದಂಗಾಗುವುದು
ಹೀಗಾಗಬಾರದಿತ್ತು

ಆಸೆಯ ಹೊಂಗಿರಣ ಮಿನುಗೀತೆ ?
ಕನಸುಗಳು ಸಾಕಾರ ರೂಪ ಪಡೆಯುವವೆ ?
ಮುಗ್ಧ ಮನವು ಇನ್ನೂ ಗಮನಿಸುತಿದೆ
ಕಾಣುತ ಈಗ, ವಾಸಿಸುತಿದೆ, ಮೈಮರೆತಿದೆ
ಕ್ಷಣಹೊತ್ತು ಕಣ್ಣುಮುಚ್ಚಿ ಕನಸು ಕಾಣುವಾಗ

- ಭ. ಲ. ಬಿರಾದಾರ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ್

# ನನ್ನ ಊರು

ಒಂದಿತ್ತು ಊರು
ಅಲ್ಲಿತ್ತು ನನ್ನ ಸೂರು
ಆದರೆ ಈಗ ನಾನೆಂತು ಹೇಳಲಿ
ಊರ ಹೆಸರು ?

ಊರಲ್ಲಿತ್ತು ಮನೆ
ಊರ ಹೊರದಬ್ಬಿದರು ನನ್ನೆ
ಆದನ್ನೇನು ನೆನೆನೆನೆದು
ನಾ ಹೇಳಲಿ ?

ತಿಳಿದೋ - ತಿಳಿಯದೋ ಕೃತ್ಯವೆಸಗಿದೆ
ದುಷ್ಟ ಚಕ್ರದೊಳಗಿನ ಕಗ್ಗಂಟಲಿ ಸಿಲುಕಿದೆ
ಉಧ್ವಸ್ತಗೊಂಡಿತು ಅದು ಇದು ಎಲ್ಲವೂ
ಕ್ಷಣದೊಳಗೆಲ್ಲ !

ನೆರೆಯವರ ಮೇಲಿತ್ತು ಪ್ರೀತಿ
ಮರೆತು ಹೋಯಿತು ನೀತಿ
ಕಳಚಿ ಕುಲಗೆಟ್ಟಿತು ಸಂಬಂಧ
ನನ್ನದೂಃ ಸ್ವಾಮಿ !

ಮನವು ಗೌರವದ ಗೂಡಾಗಿತ್ತು
ಎಲ್ಲವು ಹೋಯಿತು ಮರೆತು
ಆ ಅರಿವನ್ನು ಕಾಯದೀ ಸಂಗ್ರಹಿಂಸಿಟ್ಟು
ನಾ ಗಮನಿಸುತ್ತಿದ್ದೇನೆ !

ನಿರ್ಲೋಭದ ಜೀವ
ಊರೊಳಗಿತ್ತು ಹೆಸರಿನ ಹವಾ
ನಂಟರಿಷ್ಟರನ್ನ ಕಾಣಬಾರದೆಂಬ
ನನ್ನ ಈ ಭಾವ !

ಒಂದಿತ್ತು ಊರು
ಅಲ್ಲಿ ನನ್ನ ಸೂರು
ಆದರೆ ಈಗ ನಾನೆಂತು ಹೇಳಲಿ
ಊರ ಹೆಸರು ?

- ಭ. ಲ. ಬಿರಾದಾರ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

## ಇತಿಹಾಸ

ನಾನ್ಯಾವಾಗ ಈ ಜಗತ್ತಿನ ಇತಿಹಾಸ ಬರೆಯುವೆನೋ,
ಅಂದು ನನ್ನ ಮೇಲಾದ ಘೋರ ಅನ್ಯಾಯ ದಾಖಲಿಸುವೆನು !
ನಿರ್ದೋಷಿಗಳನ್ನು ದೋಷಿಗಳೆಂದು ಠರಾಯಿಸೋ
ವ್ಯವಸ್ಥೆಯ ಇತಿಹಾಸ ಬರೆಯುವೆನು !

ಸಮಾಜಗೈದ ಅತ್ಯಾಚಾರಗಳ ಪಟ್ಟಿಮಾಡಿ
ಗಾಥಾ ಹೇಳಿಯೇನು !
ಗೀತಾ, ಕುರಾನಗಳ ಖರೇ ಅರ್ಥ ತಿಳಿಸುವೆನು
ಪ್ರತಿಯೊಂದು ಗುನ್ನೆ ಹಿಂದಿನ ಉದ್ದೇಶ ಬರೆಯುವೆನು !

ಸೀತೆಯ ಮೇಲಾದ ಅನ್ಯಾಯ
ಸಕೀನಾಳ ಮೇಲಿನ ದೌರ್ಜನ್ಯ ಬರೆಯುವೆನು
ಗುಡಿಯೊಳಗಿನ ಪ್ರಾರ್ಥನೆ
ಕುರಾನದೊಳಗಿನ ಆಯಾತ ಹೇಳುವೆನು !

ನಾನ್ಯಾವಾಗ ಈ ಜಗತ್ತಿನ ಇತಿಹಾಸ ಬರೆಯುವೆನೋ
ಆಗ ನನ್ನ ಮೇಲಾದ ಘೋರ ಅನ್ಯಾಯ ದಾಖಲಿಸುವೆನು !

- ರಿಯಾಝು ಬಾದಶಹಾ ಮುಲ್ಲಾ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ದೇವರೆ ನೀನೆಲ್ಲಿರುವೆ ?

ದೇವರೆ ನೀನೆಲ್ಲಿರುವೆ ?
ದೇವರೆ ನೀನು ಹೇಗೆ ಕಾಣುವೆ ?
ನಿನ್ನನ್ನು ಹುಡುಕುತ ನಾ ಮಂದಿರಕೆ ಹೋದೆ,
ನಿನ್ನನ್ನೇ ಶೋಧಿಸುತ ಮಸೀದಿಗೆ ಬಂದೆ.
ಗುಡಿಯೊಳಗೆ ಪಾಷಾಣ ಮೂರ್ತಿಯಿತ್ತು
ಮಸೀದಿಯಲಿ ಉತ್ತುಂಗ ಬಿಳಿಗೋಡೆ ನಿಂತಿತ್ತು
ದೇವರೆ ನೀನೆಲ್ಲಿರುವೆ ?
ಎಲ್ಲಿದೆ ನಿನ್ನ ನಿವಾಸ ?

ಅನಿಸಿತು ಸಂತರೊಳಗೆ ನೀನಿರಬೇಕೆಂದು
ಅನಿಸಿತು ಫಕೀರರೊಳಗೆ ನೀನೇ ಇರಬೇಕೆಂದು
ಆದರೆ ಅವರದೆಲ್ಲವೂ ಢೋಂಗಿತನ
ದೇವರೆ ! ಎಲ್ಲಿದೆ ನಿನ್ನ ನಿವಾಸ ?

ನಿನ್ನನ್ನು ಹುಡುಕುತ್ತ ಸಪ್ತಸಾಗರ ದಾಟಿದೆ
ನಿನ್ನ ಶೋಧನೆಗೆ ಊರೂರು ಅಲೆದೆ
ಕುಳಿತೆ ನಾನೊಂದು ತಾಣದಲ್ಲಿ
ನಿನ್ನ ಹುಡುಕಾಟದಲಿ ಬಾಯಾರಿದೆ

ಆಗೊಬ್ಬ ಮಾದಾಯಿ ಸಿಕ್ಕಳು
ಬೊಗಸೆಗೆ ನೀರ ಹಣಿಸಿದಳು,
ರೀ ಸ್ವಾಮಿ ! ಆಗ ಅದೇ ಕ್ಷಣಕ್ಕೆ ನನಗೆ ಹೊಳೆಯಿತು
ದೇವರು ಗುಡಿಗುಂಡಾರಗಳಲ್ಲಿಲ್ಲ, ಅಲ್ಲಾ ಮಸೀದಿಯೊಳಗಿಲ್ಲ
ಅವ... ಇದ್ದಾನೆ ಮಾದಾಯಿಯ ಹೃದಯದೊಳಗೆ
ಅಡಗಿದ್ದಾನೆ ಮನುಷ್ಯನ ಮಾನವೀಯತೆಯೊಳಗೆ

- ರಿಯಾಝು ಬಾದಶಹಾ ಮುಲ್ಲಾ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಯಾಕೆ ಬಂದೆ ?

ಈ ಆಟ ಅಪರಿಚಿತವಾಗಿತ್ತು
ಈ ಆಟ ಆಡಬಾರದಾಗಿತ್ತು
ಯಾಕೆ ಹೂಡಿದರು ಈ ಆಟವನ್ನು
ಅಂದಿನಿಂದ ನನ್ನಂತರಂಗ ಖಾಲಿ ಖಾಲಿ

ಸುಖವಾಗಿದ್ದೆ ನನ್ನ ಬದುಕಿನೊಳಗೆ
ಯಾಕೆ ಬಂದೆ ನೀ ನನ್ನ ಮನಸ್ಸಿನೊಳಗೆ

ಯಾವ ಆಸೆ, ಆಕಾಂಕ್ಷೆಗಳಿರಲಿಲ್ಲ
ಬಿತ್ತಿ ಹೋದ್ಯಾಕೆ ಆಶೆಯ ಬೀಜಗಳನ್ನ
ಕಾಲುದಾರೀಲಿ ಹೊರಟಿದ್ದೆ
ಸೆಳೆದ್ಯಾಕೆ ಮಳ್ಳ ಮನವನ್ನ
ಸುಖವಾಗಿದ್ದೆ...

ಹೊತ್ತಿಸಲೇ ಬೇಕಿತ್ತು ಗ್ರೀಷ್ಮದ ಕಾಡಾಗ್ನಿ
ಅಯ್ಯೋ ಹುಚ್ಚಿ ! ನನ್ನಷ್ಟಕ್ಕೆ ನಾ ನಗುನಗುತ ಸುಟ್ಟುಕೊಳುತ್ತಿದ್ದೆ
ತೋರಿದ್ಯಾಕೆ ವಸಂತದ ಹೂ, ಹಸಿರು, ಚಿಗುರನ್ನು
ತಿಳಿಯದಾದೆ ನಿನ್ನೀ ಧೂರ್ತ ಶರವನ್ನು
ಸುಖವಾಗಿದ್ದೆ ...

ಸೌಖ್ಯದ ಈ ಪರಿಭಾಷೆ ವಿಭಿನ್ನ
ಕಾಣ್ತಿಲ್ಲ ಕಾಲ್ತುಳಿತದಲಿ ನಲುಗಿ ಜೀರ್ಣವಾದ ಸುಮನಗಳು
ನೀನ್ಯಾಕೆ ವರ್ಣಿಸಿದೆ ವಿಚಿತ್ರ
ನೀನ್ಯಾಕೆ ತೋರಿಸಿದೆ ಪ್ರೀತಿಯ ಕಲೆಗಳನ್ನ
ಸುಖವಾಗಿದ್ದೆ ...

ಮನವು ಅರಳಿದ್ದೆ ಗೊತ್ತಾಗಲಿಲ್ಲ
ಆದರೂ ಹಾಕುತ್ತಿದ್ದೆ ದಿಗ್ಬಂಧನ
ಇಷ್ಟ್ಯಾಕೆ ಮಾಡಿದೆ ಆಕ್ರಂದನ
ಬೀರಿದ್ಯಾಕೆ ನೀ ಕೊಂಕುನೋಟ
ಸುಖವಾಗಿದ್ದೆ ನನ್ನ ಬದುಕಿನೊಳಗೆ
ಬಂದ್ಯಾಕೆ ನೀ ನನ್ನ ಮನದೊಳಗೆ .

- ಅನಿಲ ಸುಭಾಷರಾವ ವೈದ್ಯ
ನ್ಯಾಯಾಂಗ ಕೈದಿ, ಮಧ್ಯವರ್ತಿ ಕಾರಾಗೃಹ
ಔರಂಗಾಬಾದ

# ದಿಕ್ಕಿಲ್ಲದ ಗಿಳಿ

ಸ್ವಚ್ಛಂದ ಸುಖೀ ಗಿಳಿ ನಾನಾಗಿದ್ದೆ
ಈಗ ನಾನು ಪಂಜರದಲಿ ಕೈದು,
ಹೇಗೆ ಹೇಳಲಿ ಪರಿಸ್ಥಿತಿ ಬಲು ಬಿಕ್ಕಟ್ಟು

ತಿಂದುಂಡು ಸಂತಸದಿಂದ ಬದುಕುತ್ತಿದ್ದೆ
ಈ ಮರದಿಂದ ಆ ಮರಕ್ಕೆ ನೆಗೆಯುತ್ತಿದ್ದೆ
ಮಳೆಗಾಲದಲಿ ತಮಾಷೆ ಮಾಡಿ ನಗುತ್ತಿದ್ದೆ
ನೀಳ ನೀಲಿ ಬಾನಂಗಳದಲಿ,
ತುಂತುರು ಮಳೆಯಲಿ ಥಕಥೈ ಕುಣಿಯುತ್ತಿದ್ದೆ

ಸ್ವಚ್ಛಂದ ಸುಖೀ ಗಿಳಿ ನಾನಾಗಿದ್ದೆ
ಈಗ ನಾನು ಪಂಜರದಲಿ ಕೈದು
ಹೇಗೆ ಹೇಳಲಿ ಪರಿಸ್ಥಿತಿ ಬಲು ಬಿಕ್ಕಟ್ಟು

ನನಗೆ ಸ್ವಾತಂತ್ರ್ಯ ನೀಡಲು ಯಾರಾದರೂ ಸಿದ್ಧರಿದ್ದೀರಾ ?
ನನಗೆ ಕುಣಿಯುವುದಿದೆ, ನನಗೆ ಹಾಡಾಡುವುದಿದೆ,
ನೀಳ ನೀಲಿ ಬಾನಂಗಳದಿ ತುಂತುರು ಮಳೆಹನಿಯ
ಸಂತಸ ಹೀರುವುದಿದೆ, ಯಾರಾದರೂ ಸಿದ್ಧರಿದ್ದೀರಾ ?
ನಾನೊಂದು ದಿಕ್ಕಿಲ್ಲದ ಗಿಳಿ, ತೀರ ದಿಕ್ಕಿಲ್ಲದ ಗಿಳಿ

- ಸಂತೋಷ ಸಟವಾಜಿ ಸಸಾಣೆ
ಮಧ್ಯವರ್ತಿ ಕಾರಾಗೃಹ, ನಾಸಿಕ ರಸ್ತೆ

# ಅವ್ವನ ನೆರಳು

ಎಷ್ಟು ಸೊಗಡು ಆ ಬದುಕು
ಅದೆಷ್ಟು ಉದಾಸ ಈ ಬದುಕು

ಆಗ ನಾನಿದ್ದೆ ಅವ್ವನ ಕಮ್ಮನೆಯ ನೆರಳಲಿ
ಈಗ ನ್ಯಾಯಾಧೀಶರ ಬಿಗಿ ಮುಷ್ಟಿಯಲಿ

ಎದ್ದು ಎದ್ದೊಡನೆ ಬೆಳಿಗ್ಗೆ ಬಿಸಿನೀರು ಕಾಯಿಸೋಳು
ಸ್ನಾನ ಆದೊಡನೆ ತಿನ್ನಲು ಬಿಸಿತಿಂಡಿ ಬಡಿಸೋಳು
ತಿನ್ನದಿರೆ ಸಿಟ್ಟಾಗೋಳು - ಮಾತ್ರ ತಣ್ಣಗೆ

ಉಣಲು ಬಾರದಾಗ ಗಲ್ಲಿಗಲ್ಲಿ ತಿರುಗೋಳು
ಆಕೆಯೂ ನನ್ನ ಜತೆಯಲ್ಲೇ ಕೂತು ಉಣ್ಣೋಳು

ಎಂದೂ ಸಿಟ್ಟಿಗೇಳಲಿಲ್ಲ, ಒಮ್ಮೆಯೂ ಅಳಿಸಲೂ ಇಲ್ಲ
ಇಂಥ ಮಹಾತಾಯಿಯ ಒಂದು ಮಾತು ನಾ ಕೇಳಲಿಲ್ಲ,
ಆಕೆ ಅರ್ಥವಾಗಲೇ ಇಲ್ಲ

ಹಾಗೊಂದು ಪಕ್ಷ ಕೇಳಿದ್ದರೆ, ಅರ್ಥೈಸಿಕೊಳ್ಳಬಹುದಿತ್ತು
ಹಾಗಿದ್ದರೆ ನ್ಯಾಯಾಧೀಶರ ಕ್ಯಾಂಟಿನಲಿ ನಾನಿರುತ್ತಿರಲೇ ಇಲ್ಲ

ಮನಸ್ಸೀಗ ಹೀಗೆ ಉದಾಸಗೊಳ್ಳುತ್ತಲೇ ಇರುತ್ತಿರಲಿಲ್ಲ
ಯಾಕೆಂದರೆ ಹೀಗಿರತದೆ ಮಹಾತಾಯಿ ನೆರಳು

- ಸಂತೋಷ ಸಟವಾಜಿ ಸಸಾಣೆ
ಮಧ್ಯವರ್ತಿ ಕಾರಾಗೃಹ, ನಾಸಿಕ ರಸ್ತೆ

# ಅವ್ವ

ನೀನೆಷ್ಟು ಸಹಿಸಿದೆ
ನನಗಾಗಿ ಕಷ್ಟ-ನೋವು,
ನಾನೀಗ ಶೂನ್ಯ
ನೀ ದೂರವಿದ್ದಾಗಲೂ

ಎಂಥ ಹುಚ್ಚೆ ನಿನ್ನ
ಕಂದ ಹೀಗೆಲ್ಲ ಪರದಾಡಿತು,
ಪ್ರತಿಕ್ಷಣವೂ ನನ್ನ ಕೂಗು
ನಿನಗಾಗಿ ಹಪಾಹಪಿಸಿತು

ಜೈಲುವಾಸದ ಖೇದವಿಲ್ಲ
ಇದಂತೂ ದೈವದ ಭೋಗವೇ ಎಲ್ಲ
ದುಃಖ ಉಂಟು, ನನಗಾಗಿ
ನಿನ್ನ ವ್ಯಾಕುಲ ಉಸಿರಿಗೆ

ನಿನ್ನ ಕನಸುಗಳ ಸಾಕಾರರೂಪವನು
ನಾ ಹರಿದು ಚೆಲ್ಲಿ ಹೋದೆ
ನಿನ್ನ ಉದರದಲಿ ಜನಿಸಿಯೂ ನಾ
ದುಃಖಗಳನ್ನು ಬಿತ್ತಿ ಹೋದೆ

ನಿನಗಾಗಿಯೇ ಹೃದಯದೊಳಗಿದೆ ಚಡಪಡಿಕೆ
ನಾನೇ ನಿನಗೆ ನೋವುಣಿಸಿದೆ
ಹೇಗೆ ಹೊರಡುವುದು
ಇಬ್ಬರ ಮನದಲ್ಲೂ ಇದೇ ಧಡಪಡಿಕೆ

ನನ್ನ ಬದುಕಿಗೆ ಈಗ
ಕವಡಿ ಕಿಮ್ಮತ್ತೂ ಉಳಿದಿಲ್ಲ
ನಾನೀಗ ಶೂನ್ಯ
ನೀನು ದೂರವಿದ್ದಾಗಲೂ

- ಅನಿಲ ಸುಭಾಷರಾವ ವೈದ್ಯ
ನ್ಯಾಯಾಂಗ ಬಂಧಿ, ಮಧ್ಯವರ್ತಿ ಕಾರಾಗೃಹ
ಔರಂಗಾಬಾದ

# ವನವಾಸ

ಹೇಗೆ ಬಂದಿತು ನನ್ನ ಬದುಕಿನಲ್ಲಿ ವನವಾಸ
ಹೃದಯ ಒಡೆಯಿತು ಭೂಮಿ ಬಾಯ್ತೆರೆಯಿತು
ಆಯಿತು ನನ್ನದೆಲ್ಲ ಸರ್ವನಾಶ

ಅಡ್ಡನಿಂತ ಬೆಟ್ಟ ದುಃಖದ ಎದುರು
ಬಂಧಿಸ್ತ ಬದುಕು ಕಾಣುವುದು
ಸಂಸಾರದ ಹೂವು ಬಾಡಿತು ಈಗ ದಟ್ಟ ಮಂಜು ಮುಸುಕಿತು
ಹಗಲಿರುಳು ಕಬ್ಬಿಣದ ಸರಳುಗಳ ಹಿಂದೆ
ಕಂಬನಿ ಹರಿಸುತ್ತ ಕೂಡುವುದು

ನಾನೆಂದು ದಡ ಸೇರಿಯೇನು
ಸುರಕ್ಷಿತ ಮನುಷ್ಯನಾಗಿ ನಾನೀಗ ಉಳಿದಿಲ್ಲ
ಮನಸ್ಸು ಸ್ಥಿರವಾಗಿಲ್ಲ
ಆಯುಷ್ಯದಲ್ಲಿ ಅನುಭವಿಸಿದೆ ಅನಂತ ವೇದನೆ

ನನ್ನ ಬದುಕಲ್ಲಿ ತೃಪ್ತ ಗ್ರೀಷ್ಮಯಾಕೆ ಬಂದಿತು ?
ಈಗ ಈ ಸಮಾಜ ನನ್ನತ್ತ ತುಚ್ಛವಾಗಿ ನೋಡುವುದು
ಅದು ನನ್ನನ್ನು ಬದುಕಿನಿಂದ ಹದ್ದು ಪಾರು ಮಾಡುವ ಹಾಗೆ

ಕ್ಷಣದ ತಪ್ಪಿಗೆ ಬಂತು ಈ ವನವಾಸ
ಸಪ್ತಸಾಗರ ದಾಟಿ ಸೇರಿತಿದು ನನ್ನ ಬದುಕಿನೊಳಗೆ

- ಮನೋಹರ ರಣಪಿಸೆ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಕಳಂಕ

ಅಪರಾಧಿ ಕಳಂಕ ನನ್ನ ಹಣೆ ಮೇಲೆ
ಕಬ್ಬಿಣ ಕೈಕೊಳ ತೊಟ್ಟ ಕೈಗಳು
ನನ್ನ ಬಾಂಧವರು ದೂರದಿಂದಲೇ ನೋಡುವರು
ನಾನು ದುರ್ಬಲನಾದೆ. ಹರಿದು ಹೋದವು ಕರುಳು ಬಳ್ಳಿ
ಆತ್ಮೀಯರು ನನ್ನನ್ನೇ ಮರೆತರು
ಬಿಕ್ಕುವ ರೋದನೆಯಲಿ, ಕಂಗಳು ಮುಳುಗಿ ಹೋದವು
ವೇದನೆಯಲಿ ಬದುಕೋದು ಕಡುಕಷ್ಟವು
ಜೀವಾವಧಿ ಶಿಕ್ಷೆ ಭೋಗಿಸದ ವಿನಃ ಬೇರೆ ಪರ್ಯಾಯವಿಲ್ಲ
ನೆನಪಿನ ಮೋಡಗಳು ಗರ್ಜಿಸಿದವು
ಸಿಡಿಲು ಮಿಂಚಾಗಿ ಆರ್ಭಟಿಸಿತು
ಒಂದು ತಪ್ಪು ಅದ್ಹೇಗೆ ದ್ರೋಹ ಬಗೆಯಿತು
ಜೀವಾವಧಿ ಶಿಕ್ಷೆ ತಟ್ಟನೆ ಕೈ ಹಿಡಿದು ಬಿಟ್ಟಿತು
ಖುಲ್ಲಾ ಮಾತಾಡಲು ಈಗ ಅಭ್ಯಾಸವಿಲ್ಲ
ನಾಲ್ಕು ಗೋಡೆಗಳಾಚೆ ನನ್ನ ಓಟವಿಲ್ಲ
ಮನುಷ್ಯನೆಂದು ನನ್ನೊಳು ರುಬಾಬಿಲ್ಲ
ಜನಮಾನಸದೊಳು ನನ್ನ ಹೆಸರೇ ಇಲ್ಲ

- ಪ್ರಕಾಶ ತುಕಾರಾಮ ಕದಮ್
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಜೀವಾವಧಿ ಶಿಕ್ಷೆ

ಜೀವಾವಧಿ ಶಿಕ್ಷೆ ಭೋಗಿಸುತ್ತ
ಚಟ್ಟದ ಮೇಲೆ ಜೀವಂತ ಸಾಗುವುದು
ಇಂಥ ಚಟ್ಟಕ್ಕೆ ಕಟ್ಟುವವರು ಬಹಳ ಜನ
ಆದರೆ ಬಿಡಿಸುವವರು ಬಹಳ ಕಮ್ಮಿನೋ ಮಾರಾಯ
ಹಲವರು ಶಬ್ದಗಳ ಪ್ರೀತಿಯ ಕೊಳ ತೊಡಿಸುತ್ತಾರೆ
ಕೆಲವರು ಶತ್ರು ಬಲವನ್ನು ಉಪಯೋಗಿಸುತ್ತಾರೆ
ಕಬ್ಬಿಣ ಸರಳುಗಳ ಹಿಂದೊಯ್ದು ಇಡುತ್ತದೆ
ಕ್ಷಣದೊಳಗೆ ಮೋಸಮೆಸಗಿ ಬಿಡುತ್ತದೆ
ಸ್ವತಃ ಗುನ್ನೆ ಮಾಡಿ
ಪುಢಾರಿಯ ಪೋಜು ಕೊಡುತ್ತಾರೆ
ಹಣ, ಸಂಪತ್ತು, ನ್ಯಾಯ ತಂತ್ರಗಾರಿಕೆಯ ಮುಷ್ಟಿಯಲ್ಲಿ
ಬೇಡಿಗಳು ಮಾತ್ರ ನಿರಪರಾಧಿಗಳ ಕೈಯಲ್ಲಿ
ಖೊಟ್ಟಿ ಸಾಕ್ಷಿದಾರರು ಖರೆ ಆಗುತ್ತಾರೆ
ನೋಟಿನ ಕಂತೆ ಕಪ್ಪು ಕೋಟುಗಳ ಜೇಬಿನಲ್ಲಿ
ನಿರಪರಾಧಿ ಇರುತ್ತಾನೆ ಜೈಲಿನಲ್ಲಿ
ಅಪರಾಧಿ ಮಾತ್ರ ಸಮಾಜದಲ್ಲಿ.

- ರವೀಂದ್ರ ಸಂತೋಷ ಬನಸೋಡೆ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಅವ್ವ

ಒಬ್ಬನನ್ನೆ ತೊರೆದು ಅವ್ವ
ನೀನು ದೂರ ಸರಿದೆ
ವನವಾಸಿ ಈ ಜೀವ
ಕರುಣಾಜನಕ ಸ್ಥಿತಿ ಬಂದೊದಗಿದೆ

ನನ್ನವರು ಇಲ್ಲಿಲ್ಲ
ಒಬ್ಬನೇ ಅಲೆಯುತ್ತೇನೆ
ಹೃದಯದಲಿ ನಿನ್ನ ನೆನಪು
ಹುದುಗಿಸಿ ಸೊರಗುತ್ತೇನೆ

ಕಣ್ಣೊಳಗಿನ ನೀರ ಹನಿ
ಕೆನ್ನೆ ಮೇಲೆ ಇಂಗುವುದು
ನಿನ್ನ ವಾತ್ಸಲ್ಯಕ್ಕಾಗಿ
ಜೀವ ಕಳವಳಗೊಳ್ಳುವುದು

ಅವ್ವ ! ಈ ವಿಶ್ವ ಎಷ್ಟು ವಿಶಾಲ
ಆದರೆ ಯಾರಿಗೂ ಯಾರಿಲ್ಲ
ಕ್ಷಣಕ್ಷಣಕ್ಕೆ ನನಗೆ ಕೇವಲ
ನಿನ್ನದೇ ನೆನಪು ಬರುವುದಲ್ಲ !

ರೆಕ್ಕೆ ಕತ್ತರಿಸಿದ ಹಕ್ಕಿಯಂತೆ
ಚಡಪಡಿಸುತ್ತ ನಾ ಬದುಕುತ್ತಿದ್ದೇನೆ
ಅಪ್ಪಿತಪ್ಪಿ ಕೂಡ ಯಾರ ಮಮತೆಯ ಕೈಯೂ
ನನ್ನ ತಲೆ ನೇವರಿಸುವುದಿಲ್ಲ !

ಹಕ್ಕಿಯು ತನ್ನ ಮರಿಗಳಿಗೆ
ಕೊಕ್ಕಿಂದ ಕಾಳು ಉಣಿಸುವುದು
ಹಸು ಕರುವಿಗಾಗಿ
ಮತ್ತೆ ಮತ್ತೆ ಮರಳುವುದು

ನಿನ್ನ ಬಿಟ್ಟು ಪ್ರಪಂಚದೊಳಗೆ
ಬದುಕಲು ಅರ್ಥವಿಲ್ಲ
ಕರೆದುಕೋ ನನ್ನನು
ಆ ಕರೆ ಈಗಲೇ ಬರುವುದು

ನಿನ್ನ ಮಮತೆಯ ಮುಂದೆ ದೇವರು ಶೂನ್ಯ
ಪ್ರಪಂಚದಲಿ ಕೇವಲ ಅದ್ವೈ
ನೀನೇ ಧನ್ಯ

- ದತ್ತಾ ಪಾಟೀಲ - ರಹಾಣೆ
ಔರಂಗಾಬಾದ ಮಧ್ಯವರ್ತಿ ಕಾರಾಗೃಹ ಹರ್ಸೂಲ

# ಜೈಲು

ಸೃಜನಶೀಲ ಸಮಾಜದ
ವ್ಯಾಖ್ಯೆಯ ಲೆಕ್ಕದಲಿ ಕೂಡದ
ಆದರೆ ನ್ಯಾಯಕ್ಕಾಗಿ ಹಳಹಳಿಸುವ
ಸತ್ಯದ ಆಸೆ ಇರಿಸಿಕೊಂಡು
ಅದರ ಮೇಲೆ ನಂಬಿಕೆಯಿಟ್ಟು
ಅನ್ಯಾಯದ ವಿರುದ್ಧ ಪ್ರತಿಕಾರ
ಮಾಡುವಾಗ, ಗುನ್ಹೆ ಮಾಡಿದ
ಮನುಷ್ಯರ ಜಗತ್ತೆಂದರೆ...ಜೈಲು

ದೋಷ, ನಿರ್ದೋಷ, ನಿಷ್ಪಾಪ
ಎಂದು ನಡೆಕೊಳ್ಳುವ ಕಾನೂನಿನ
ಕಪಿಮುಷ್ಟಿಯಿಂದ ನುಣುಚಿಕೊಂಡು ಬದುಕುವ
ಶ್ರೀಸಾಮಾನ್ಯನ ವಿಶ್ವಾಸಘಾತ ಮಾಡುವ
ಅಸಲಿ ಗುನ್ಹೆಗಾರರಿಂದ
ದೂರವಿರುವ
ಮನುಷ್ಯರ ಜಗತ್ತೆಂದರೆ...ಜೈಲು

ಹೆಜ್ಜೆ ಹೆಜ್ಜೆಗೂ ಅಪಾಯಕಾರಿ ಸ್ವಾರ್ಥಿ ಮತ್ತು
ಮೈಗೆ ಮೆತ್ತಿದ ಲಾಲಸಿವೃತ್ತಿಯಿಂದ ಹುಚ್ಚೆದ್ದ
ಬಂಧು- ಬಳಗ, ಜಾತಿ, ಮತ
ಯಾವುದೂ ಚಿಂತೆ ಮಾಡದ
ಪಾಪಿ ಮನುಷ್ಯರಿಂದ ಅಲಿಪ್ತವಿದ್ದು
ತಮ್ಮ ಗುನ್ಹೆಯ ಪ್ರಾಯಶ್ಚಿತ
ಅನುಭೋಗಿಸುವ ಮನುಷ್ಯರ ಜಗತ್ತೆಂದರೆ... ಜೈಲು

ತಾಯಿ-ತಂದೆ, ಮಡದಿ, ಅಣ್ಣ-ತಂಗಿ
ಕಾಕಾ-ಕಾಕಿ, ಮಾಮಾ-ಮಾಮಿ
ಅತ್ತೆ-ಮಾವ, ಅಳಿಯ-ಸೊಸೆ
ಮನದೊಳಗೆ ಬೇರೂರಿದ
ಈ ಸಂಬಂಧಗಳ, ತೊಡಕುಗಳ
ಸಮಸ್ಯೆಗೆ ಪರಿಹಾರ ನೀಡುವ, ಮಮತೆಯ
ವಂಚನೆಯ ಪ್ರಪಂಚದ ಪರಿಚಯ
ಮಾಡಿಕೊಡುವ ಮನುಷ್ಯರ ಜಗತ್ತೆಂದರೆ...ಜೈಲು

ಉತ್ತುಂಗ ಗೋಡೆಯ ಕಠೋರ
ಕಲ್ಲುಗಳಂತೆ ಕಾಠಿಣ್ಯ ಕಲಿಸುವ
ಉಕ್ಕಿನ ಸರಳುಗಳಂತೆ ಕಠಿಣಗೊಳಿಸುವ
ಭಯಗ್ರಸ್ತ ಮನಕ್ಕೆ ಧೈರ್ಯಕೊಡುವ
ಸಂಘರ್ಷ ಮತ್ತು ಹೋರಾಟ ಕಲಿಸುವ
ಇನ್ನೊಬ್ಬರ ದುಃಖ ಕಂಡು
ಸ್ವಂತಕ್ಕೆ ತತ್ವಜ್ಞಾನ ಹೇಳಿಕೊಳ್ಳುವ
ಪೊಟ್ಟಿ ವಿಶ್ವದ ಖರೇ ಪರಿಚಯ
ಮಾಡಿಕೊಡುವ ಮನುಷ್ಯರ ಜಗತ್ತೆಂದರೆ...ಜೈಲು

- ದತ್ತಾ ಪಾಟೀಲ - ರಷಾಣೆ
ಔರಂಗಾಬಾದ ಮಧ್ಯವರ್ತಿ ಕಾರಾಗೃಹ, ಹರ್ಸೂಲ

ಇಲ್ಲಿ

ಇಲ್ಲಿ,
ವಿದ್ರಾವಕ ಹೃದಯ
ಶೂನ್ಯ ದೃಷ್ಟಿ,
ಮಿದು ಮನವು
ಆರ್ತ ಸ್ವರದ ಕರೆಗೆ ಹಸಿದಿದೆ.

ಇಲ್ಲಿ,
ಬಾಡಿದ ಚಹರೆ
ಒಣಗಿದ ದೇಹ
ಜಡಗೊಂಡ ಸ್ಪಂದನ
ಮಮತೆಯ ಸ್ಪರ್ಶಕ್ಕೆ ಹಾತೊರೆದಿದೆ.

ಇಲ್ಲಿ,
ಉಸುರುಗಟ್ಟಿದ ಮಾನಸಿಕತೆ
ಭಾವನೆಗಳ ದಾಹ
ಕಳಕೊಂಡ ಸಂಕಲ್ಪ
ನಿಜ ಅಸ್ತಿತ್ವವನ್ನು ಹುಡುಕುತ್ತಿದೆ.

ಇಲ್ಲಿ,
ಬಂಧಿಸ್ತ ಬದುಕು
ಮಬ್ಬಾದ ನಗು
ಬತ್ತಿದ ಅಳು
ಸ್ವಾತಂತ್ರ್ಯಕ್ಕೆಂದು ಯಾಚಿಸುತ್ತಿದೆ.

- ಫಿಲೀಪ್ ಭೀಮರಾವ ಶಿರಸಾಠ
ಜಿಲ್ಲಾ ಕಾರಾಗೃಹ, ಪೈಠಣ

# ಜೈಲಿನ ಗೋಡೆ

ಜೈಲಿನ ಉತ್ತುಂಗ ಗೋಡೆ
ನಮಗಾಗಿ ಜೋಗುಳ ಹಾಡುವುದು
ನೀತಿ ನಿಯಮಗಳ ಎದೆಹಾಲನು
ನಿತ್ಯವು ಅದು ಉಣಿಸುವುದು

ಸಂಸ್ಕಾರದ ಸವಿ ತುತ್ತನ್ನೂ
ವಾತ್ಸಲ್ಯದಿಂದ ಉಣಿಸುವುದು

ನೀಡಿ ನಮ್ರತೆಯ ಬೋಧನೆ
ಕರಗಿಸಿತು ನಮ್ಮ ಸಿಟ್ಟನ್ನೇ

ಕೊಟ್ಟು ಸಮತೆಯ ಮಂತ್ರ
ಕಲಿಸಿತು ನಮಗದು ಮಾನವ್ಯ ತಂತ್ರ

ಇದು ಕೇವಲ ಕಲ್ಲುಗೋಡೆಯಲ್ಲ
ರೋಗ ಕಳೆದು ಚಿತ್ತಶುದ್ಧಗೊಂಡಿತಲ್ಲ

- ಫಿಲೀಪ್ ಭೀಮರಾವ ಶಿರಸಾಠ
ಜಿಲ್ಲಾ ಕಾರಾಗೃಹ, ಪೈಠಣ

# ಅವ್ವ

ಅವ್ವ ನಿನಬಿಟ್ಟು ಈ ಜಗವು ಕಾಣುವುದು ಭಿನ್ನ
ನವಮಾಸ ನಿನ್ನ ಗರ್ಭದೊಳಿರಲು
ಹೆತ್ತು, ನೀ ನನ್ನನು ಈ ಜಗಕೆ ನೀಡಿದೆ
ಕಾಣಲು ಬನ್ನಿರೋ ಈ ಬದುಕನೆಂದು

ಎಷ್ಟೊಂದು ಕಡು ಕಷ್ಟ ಸಹಿಸಿದೆ
ವಾತಲ್ಯದ ಮಳೆ ನೀ ಕರೆದೆ
ನನ್ನ ಬಿಟ್ಟು ನೀನೇಕೆ ಹೋದೆ?

ವಾಸ್ತವ ಜೀವನದಲಿ ನಾನಿರಲು
ಹೃದಯದೊಳಿರುವ ನಿನ್ನ ನೆನಪು
ಗಂಟಲು ತುಂಬಿ ಬಿಕ್ಕಳಿಸಿತು

ಆ ದೇವರಲಿ ಸದಾಶಿವ ಕೇಳುವನು
ಅದೆಂಥ ಅಪರಾಧ ನಾಗೈದೆನೆಂದು
ನಾನುಳಿದೆನೋ ನಿರಾಧಾರಿಯಾಗಿ !

- ಸದಾಶಿವ ಯಾದವ ಗಾಯಕವಾಡ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಮೊರೆ

ಹೇ ಭಗವಂತನೆ ದಯದೋರು,
ನಿನ್ನ ಪಾದ ಹಿಡಿದಿರುವೆ
ನನ್ನ ಜನುಮದ ಮೇಲೆ
ಅನ್ಯಾಯದ ಹಕ್ಕಿಯ ರೆಕ್ಕೆ ಪಟಪಟಿಸಿದೆ
ಈಗ ನಾ ಹೋಗಲೆಲ್ಲಿ ನಿನ್ನಬಿಟ್ಟು...

ಆಯುಷ್ಯವಾಯಿತು ಬೆಂಕಿಯ ಕುಂಡ
ಸುತ್ತುವರಿದಿದೆ ಸಂಕಟದ ಕೆಂಡ
ದಾರಿಯನು ತೋರು, ನೀನೇ ಗುಣವಂತ...

ಜಗವು ನನ್ನನು ಹೇಗೂ ನಿಂದಿಸಲಿ
ನೀನೇ ನನ್ನ ಕೃಪಾಸಿಂಧು
ಮೊರೆ ಹೊಕ್ಕ ಈ ಸದೂ ಎಂಬ ಬಂಧು

- ಸದಾಶಿವ ಯಾದವ ಗಾಯಕವಾಡ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ನಮನ ತಾಯಿ ಭಾರತಿಗೆ

ನಮನ ನೆಲದ ಮಣ್ಣಿಗೆ, ಮುಗಿಲು ಚುಮ್ಮೋ ಮೂರು ಬಣ್ಣಕೆ
ತಾಯಿ ಭಾರತಿಗೆ ಆಕೆ ಕರುಳ ಕುಡಿ ಯೋಧರಿಗೆ...ಜೀ ಜೀ
ಶಾಹಿರನ ದಪ್ಪು ಖಣಖಣಿಸಿತು ಜೈಲಿನ ಮಧ್ಯದಲ್ಲಿ
ಸಬ್ಬಾದ ಶಾಹಿರ ಕೇಳಿರಪ್ಪೋss ಅವ ಹಾಡೋನು
ಕಾರ್ಗಿಲ್ ಗಾಥೆಯನು ಜೀ ಜೀss

99ರ ಇಸವಿಯಲಿ, ಕಡುವೈರಿ ಕಾಲು ಈ ಮಣ್ಣಲಿ
ಆಟಿಲರು ಅರಿತರು, ಹುರಿದುಂಬಿಸಿದರು ಯೋಧರ ಕೆಚ್ಚೆದೆಗೆ
ಹುಕುಂ ತಲುಪಿತು ಗಡಿಯ ಜವಾನರಿಗೆ
ಕೆಚ್ಚೆದೆಯ ವೀರರು ಕಿಚ್ಚೆದ್ದು ಹೋರಾಡಿದರು
ನುಗ್ಗಿಬಂದವರನ್ನು ಒದ್ದೋಡಿಸಿದರು ಜೀ ಜೀ ಜೀ

ನಮ್ಮ ಸೈನ್ಯ ಬಲು ಜಬರು ಒಳ ನುಸುಳಿದವರು ಕಾಲ್ಕಿತ್ತರು
ಜವಾನರ ದಿಟ್ಟ ಹೋರಾಟಕ್ಕೆ, ವೈರಿಗಳು ಹಸನಾದರು
ಮೊಳಗಿದವು ತೋಪುಗಳು, ಎರಗಿದರು ಹದ್ದಿನಂಗೆ
ಧಡಧಡನೆ ನೆಲಕಚ್ಚಿದವು ವೈರಿ ಹೆಣಗಳು
ಭಾರತದ ಜಬರು ಹಲ್ಲೆಗೆ !

ನಿರಾಳ ನೀಲಿ ಆಕಾಶದ ನಿಲುವಿನಲಿ
ಎತ್ತರ ಎತ್ತರಕ್ಕೂ ಏರಿ ನೆತ್ತರದಲಿ ನಲುಗಿದ
ಸೈನಿಕನ ಶೌರ್ಯ ನಮ್ಮ ಹೆಗಲ ಮೇಲಿರಿಸಿದ ಋಣಭಾರ

- ಪರಮೇಶ್ವರ ನಾನಾ ಸಾಬಳೆ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಏಕತೆಯ ಭಾರತ ಬೆಳಗಲಿ

ಕಳೆಯಲಿ ಭೇದ ಭಾವ, ಉಳಿಯಲಿ ಪ್ರಜಾತಂತ್ರ
ದೊರೆತ ಸ್ವಾತಂತ್ರ್ಯದಲಿ ಏಕತೆಯು ನೆಲೆಗೊಳ್ಳಲಿ

ಈ ನೆಲದ ಬಾನಲ್ಲಿ ಧರ್ಮಗಳ ಹಕ್ಕಿ
ರೆಕ್ಕೆ ಬಿಚ್ಚಿ- ನಲಿಯಲಿ
ಹಿಂದೂ, ಸಿಖ್ಖ, ಕ್ರೈಸ್ತ, ಮುಸಲ್ಮಾನ ಒಂದೇ ಎಂದು
ಬಾಂಧವ್ಯದಿ ಬೆರೆಯಲಿ
ಭೇದ-ಭಾವ ಅಳಿಯಲಿ.

ಸಿಕ್ಕ ಸ್ವಾತಂತ್ರ್ಯವನು ಉಸಿರು ಕೊಟ್ಟು ಉಳಿಸಿರಿ
ಐಕ್ಯತೆಯ ಹಸಿರು ಎಲ್ಲೆಡೆ ನಳನಳಿಸಲಿ

ಅಂಬೇಡ್ಕರರ ಆದರ್ಶ, ಫುಲೆಯವರ ಫಲ
ಸಮುದಾಯಕ್ಕೂ ಹಬ್ಬಲಿ
ಅಕ್ಷರದ ಬೆಳಕು ಅವರು ತೋರಿದ ಹಾದಿಯಲಿ
ಬಿತ್ತಿ ಬೆಳೆದು ನಿಲ್ಲಲಿ ದೇಶಹಿತಕೆ

ದ್ರೋಹಿಗಳು ದೂರ ದೂರವಿರಲಿ,
ಅಖಂಡ ನಮ್ಮ ಭಾರತ
ನಮಗೆ ನಮ್ಮ ಸಂವಿಧಾನ, ತ್ರಿವರ್ಣ ಬಾವುಟ
ಪ್ರಾಣ ನೀಡಿ ಕುತ್ತು ಬಂದರೆ ನಾಡಿಗೆ
ದನಿಯ ಸೇರಿಸಿ ಏಕತೆಯ ಹಾಡಿಗೆ

- ರಾಮಜಿ ಧರ್ಮಾಜಿ ದುಧಮಲ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಗುಣದ ಸವಿ ಸವಿಯಿರಿ

ಗುಣದ ಸವಿ ಸವಿಯಿರಿ, ಒಡವೆಗಳಲ್ಲೇನಿದೆ?
ಹಣ್ಣಿನ ರುಚಿ ಮೆಲ್ಲಿರಿ ಎಲೆಗಳಲ್ಲೇನಿದೆ?

ಜೀವನದಲ್ಲಿ ಪರರನ್ನು ಕಂಡು
ಮನುಷ್ಯನೆಂದೂ ನಗಬಾರದು
ತನ್ನದೇನೂ ಕಾಣದಂತೆ ಪರರನ್ನು ಕಾಣಬೇಕು

ಆಗಸಕ್ಕೆ ನೆಗೆವ ಮನಸ್ಸನ್ನು ಎಂದಿಗೂ ಹತ್ತಿಕ್ಕಬಾರದು
ಹಿತ್ತಲ ಗಿಡ ಮದ್ದಿದ್ದಾಗ ಇನ್ನೆಲ್ಲಿ ಹುಡುಕುತ್ತೀರಿ?
ಆ ಹುಡುಗಿಯ ಕ್ಷುದ್ರ ಶರೀರ ಕಂಡು
ರಾಮದಾಸ, ಈ ಕವನದಲ್ಲೇನಿದೆ

- ರಾಮಜಿ ಥರ್ವಾಜಿ ದ್ದುಥಮಲ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಯಾತನೆಯ ಮೃಗಜಲ

ಈ ನಿನ್ನ ಅಲ್ಪ ಪ್ರೀತಿಗಾಗಿ
ನನ್ನ ಜೀವ ಒದ್ದಾಡಿತು
ನನ್ನ ಈ ವೇದನೆ ಕಂಡು
ಮೋಡ ಕಣ್ಣೀರ ಮಳೆ ಸುರಿಸಿತು
ಆದರೆ ಮೃಗಜಲದಂತೆ
ನಿನ್ನ ಸನಿಹ ಸುಳಿದಾಗ
ನನ್ನ ಸುಂದರ ಕನಸು ಭಗ್ನಗೊಂಡಿತು
ದೂರಿಂದ ಕಂಡ ಈ ನಿನ್ನ ಗುಣ
ಸನಿಹದಿಂದ ಅವಗುಣವೆನಿಸಿತು
ನನ್ನ ಮನ ಹತೋಟಿಯಲ್ಲಿದ್ದರೂ
ಮನತುಂಬ ನಿನ್ನ ನುಡಿಗಳದೇ ಒನಪು
ಮರೆಯ ಬೇಕೆಂದುಕೊಂಡರೂ
ಕಾಡುತ್ತದೆ ನಿನ್ನದೇ ನೆನಪು
ನಾನಿಂದು ನನ್ನ ಮೇಲೆಯೇ ರೋಸಿದೆ
ನಿನ್ನಂಥವಳನ್ನು ಪ್ರೀತಿಸಿ ಅದ್ಹೇಗೆ ಮೋಸಹೋದೆ?

- ರವೀಂದ್ರ ಕೇವಳ ಬಚ್ಚಾವ
ಎಂ. ಎ. ಬಿ. ಎಡ್.

# ರೆಂಬೆ ಮತ್ತು ಹೂವು

ಸಂಬಂಧವೆಂದರೆ ಸಂಬಂಧವೇ
ರಕ್ತ ಸಂಬಂಧವೆಂದರೆ ರಕ್ತ ಸಂಬಂಧವೇ
ಈ ಹೇಳಿಕೆಯನ್ನು ಸದಾಕಾಲ ಆಲಿಸುತ್ತೇವೆ.
ಅದಕ್ಕೆಂದೆ ಎಷ್ಟೋ ಆಸೆಗಳನ್ನು ಇಟ್ಟುಕೊಂಡಿರುತ್ತೇವೆ,
ಆದರೆ ಎಷ್ಟೊಂದು ಆಘಾತವಾಗುತ್ತದೆ
ತನ್ನದೇ ಅಂಶ ತನ್ನನ್ನು ಮರೆತಾಗ
' ತನ್ನದೇ ಮನೆಯ ಈ ಪುಟ್ಟಮರಿ
ಬೆಳೆದು ಒಮ್ಮೊಮ್ಮೆ ಯಾಕೆ ರಣಹದ್ದಾಗುತ್ತದೆ?'
ಮನಸನು ಕಿತ್ತು ತಿಂದಾಗ
ಕ್ಷೀಣಗೊಳ್ಳುತ್ತದೆ ತನುವು.
ಯಾರನ್ನು ಹೂವಿನಂತೆ ಸಲಹಿದೆನೋ
ಒಚ್ಚೆ ಮನದಂತೆ ಆ ಜೀವ ಭಾರವಾಯಿತು
ರೆಂಬೆಗೆ ಹೂವೆಂದೂ ಭಾರವಲ್ಲ
ಆದರೆ ಹೂವಿಗೆ ರೆಂಬೆ ಏಕೆ ಭಾರ ?
ಏಕೆ ಏಕೆ !
ಸಂಬಂಧವೆಂದರೆ ಸಂಬಂಧವೇ
ಇಂದಿನ ಸಂಬಂಧ ಹೀಗೆಯೇ ಇರುತ್ತದೆ.
ಹೀಗೆಯೇ ಇರುತ್ತದೆ

- ರವೀಂದ್ರ ಕೇಪಳ ಬಚ್ಚಾವ
ಎಂ. ಎ. ಬಿ. ಎಡ್.

# ನಿನ್ನ ನೆನಪು

ಬೆಳದಿಂಗಳ ರಾತ್ರಿ ಮುಗ್ಧ ಇರುಳು, ನಿನ್ನೊಲವ ಸ್ಮರಿಸುತ್ತಿರುತ್ತೇನೆ
ರಸದುಂಬಿದ ಅಧರ, ಕಮಲದ ಕಣ್ಣಾವಳ ನಿನ್ನ, ಪ್ರತಿಕ್ಷಣ ನೆನೆಯುತ್ತಿರುತ್ತೇನೆ
ನೀನೆನ್ನ ಕನಸಿನ ಕನ್ಯೆ, ಬಾನಂಗಳದ ನಕ್ಷತ್ರ ಮಿನುಗುತ್ತಿರುತ್ತದೆ
ಹಾಳುಬಿದ್ದ ಬದುಕಿನ ಹೃದಯ ದೇಗುಲದಲಿ, ನೀ ಕ್ಷಣಕ್ಷಣಕ್ಕೂ ಅರಳುತ್ತಿರುತ್ತಿ
ಉಸಿರಿನಲಿ ನೀ, ಹೃದಯದಲಿ ನೀ, ಕನಸಲಿ ನೀನೇ ತಳಮಳಿಸುತ್ತಿರುತ್ತಿ
ನಿನ್ನ ವಿರಹದಿಂದ ಇರುಳು ವೈರಿಯಾಗಿ, ನನ್ನ ಹಿಂಸಿಸುತ್ತಿರುತ್ತದೆ
ನೀನಿದ್ದರೆ ಒಲವ ಬದುಕು ನನ್ನದು, ಬೆಳದಿಂಗಳ ಹಾಡಾಗಬೇಕು
ದಟ್ಟ ಹಾಲ್ಬೆಳಕಲ್ಲಿ ನಿನ್ನ-ನನ್ನ, ಹೃದಯದೊಲವಿನ ಗೀತೆಯಾಗಬೇಕು

- ಫುಲಚಂದ ಚಂದ್ರಭಾನ ಧಾಕಣೆ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ತಳಮಳ

ಹುಣ್ಣಿಮೆಯ ಹಾಲ್ಬೆಳದಿಂಗಳು, ಬಾನುತುಂಬ ಶೀತಲಹವಾ,
ಬಾ! ಪ್ರಿಯೆ ಬೇಗನೆ, ಹಾಡೋಣ ನಾವು ಪ್ರೀತಿಯ ರಾಗ ಮಾರವಾ
ನಿನ್ನ ಪ್ರೀತಿ ಗಂಗಾಜಲದಂತೆ, ತೋಟದಲಿ ಅರಳಿದ ಕೆಂಗುಲಾಬಿ ತೆರ
ವಿರಹದಿಂದ ನಿನ್ನ ಕಣ್ಣೀರ ಹೊಳೆಗೆ ಒಡ್ಡು ಹಾಕಲಿ ಯಾವ ತರಹ?
ಮನವು ಒಂದಾಗುವವು ಪ್ರೇಮ ಸಲ್ಲಾಪದಿಂದ, ತನುವು ಕೊಡುವವು ವಿರಹದಿಂದ
ಹುಣ್ಣಿಮೆ ರಾತ್ರಿ ಹಾಡಲಿ, ಹೇಗೆ ನಾ ಪ್ರೇಮರಾಗ
ನೆನೆಯುತ್ತಲಿರುವೆ ಪ್ರೀತಿ ಬಣ್ಣ, ಸ್ಮರಿಸುತ್ತ ಇರುವೆ ಕಳೆದ ಕ್ಷಣ
ಹೃದಯದೊಳು ಕೊರೆದಿಟ್ಟೆ, ನಿನ್ನ ಪ್ರಿಯ ನೆನಪಿನ ಗಾಯದ ಕಲೆಗಳನ್ನ
ಈ ಪ್ರೀತಿಯ ದಾರಿ ಕತ್ತಲು ಅತಿಗಾಢ, ಈಗ ನಿನ್ನ ಹೇಗೆ ಹುಡುಕಲಿ?
ನೀನಿಲ್ಲದೆ ನಾ ತಳಮಳಿಸುತ್ತೇನೆ, ನೀರಿಂದ ಹೊರಬಿದ್ದ ಮೀನಿನ ತೆರ

- ಫುಲಚಂದ ಚಂದ್ರಭಾನ ಧಾಕಣೆ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ನೆನಪು

ನಿನ್ನಲಿ ನನ್ನ ಅನುರಾಗವಿತ್ತು
ನೀ ಸ್ವೀಕರಿಸದಿದ್ದರೂ
ನಿರಾತದಿಂದ ಮೋರೆ ಕಿವುಚಲಿಲ್ಲ ಆ ಕ್ಷಣ,

ನನ್ನ ಮನವ ಮುರಿದು ನೀ ಹೋದೆ
ಮರಳಿ ವಸಂತದಂತೆ ನೀ ಬಂದಾಗ
ಕ್ಷಣಹೊತ್ತು ಹರುಷಗೊಂಡವು ಕಂಗಳು

ಆದರೆ ನಾ ದೂರ ನಡೆದು ಬಂದಿದ್ದೆ
ಬೆಸುಗೆಗೊಂಡಿತ್ತು ಮನವು ನನ್ನದು ಇನ್ನೊಂದೆಡೆ

ಈಗ ನನ್ನಷ್ಟಕ್ಕೆ ಸುಖವಾಗಿ ಬದುಕಲು ಬಿಡು
ಮರೆತು ನಿನ್ನ ನೆನಪನು
ಮತ್ತೆ ಮರಳಿ ಬರಬೇಡ
ಮರಳಿ ಮತ್ತೆ ಬರಬೇಡ

- ನರೇಶ ಚರಣಸಿಂಗ ರಾಠೋಡ
ಮಧ್ಯವರ್ತಿ ಕಾರಾಗೃಹ, ನಾಸಿಕ ರಸ್ತೆ.

# ಕುಂಟು ನೆಪ

ಕೈಗಳು ಮೆಹಂದಿಯಲಿ ಬಣ್ಣಗೊಂಡಾಗ
ಈ ಬಗೆ ನಿನ್ನ ಮಾತು ತರವಲ್ಲ
ಹಾಗೆ ನಿನ್ನ ಬಳಿಕ ಈಗ
ನನ್ನ ಬದುಕಲಿ ಯಾವ ಬಿರೆ ಬಣ್ಣಗಳಿಲ್ಲ
ನಿನ್ನೊಂದು ನಿರಾಕರಣೆಯಲಿ
ಆಯುಷ್ಯ ಉಧ್ವಸ್ತಗೊಳಿಸೋ ಸ್ಫೋಟಕವಿದೆ
ಈಗ ನಾನೊಬ್ಬ ಕೈದಿ
ಬಾಕಿ ಬದುಕಿಗೆ ಜೈಲಿದೆ
ಇಂದು ನಿನ್ನ ದೇಹ
ಲಗ್ನದ ಹೊಸ ಸೀರೆಯಿಂದ ಸಿಂಗಾರಗೊಂಡಿತ್ತು
ಹೊಸಮನೆ ಆಯ್ಕೆಗೆ ನನಗೆ ದುಃಖವಿಲ್ಲ
ನಕಾರದ ಕುಂಟುನೆಪ ಮಾತ್ರ
ಬಿರೇ ಇರಲೇ ಬೇಕಿತ್ತು

- ನರೇಶ ಚರಣಸಿಂಗ ರಾತೋಡ
ಮಧ್ಯವರ್ತಿ ಕಾರಾಗೃಹ, ನಾಸಿಕ ರಸ್ತೆ

# ಸಹಜ

ಚಂದಿರ ಮೇಲೆ ಕಾಲಿಡಲು ಯಾಕೋ ಬಲು ಅವಸರ
ಅಮೇರಿಕನ್ನರು ಬಳಸಿದರು ರಕುತದ ಶಾಯಿ,

ವಿಜ್ಞಾನ ಆಸ್ಫೋಟಿಸಿತು ಬಹುದೊಡ್ಡ ಬಾಂಬು
ಮನುಷ್ಯ ಮಾತ್ರ ಬಲುಕುಬ್ಜ ನೀ ನಂಬು,

ಹಣದೆದುರು ಮನುಷ್ಯನಿಗಿಲ್ಲ ಕಿಮ್ಮತ್ತು
ದೈವದೆದುರು ನಡೆಯೋದೇ ಇಲ್ಲ ಯಾರದು ಹಿಮ್ಮತ್ತು

ಮನುಷ್ಯನೆಂದು ಬದುಕಲು ಉಳಿದಿಲ್ಲ ಅರ್ಥ
ಜೈಲಿನ ಜೀವನದಲ್ಲೇ ಇದೆ ಖರೆ ಸಾರ್ಥಕ್ಯ

- ಶಿವಾಜಿ ದತ್ತು ಪಾಟೀಲ
ಮಧ್ಯವರ್ತಿ ಕಾರಾಗೃಹ, ನಾಸಿಕ ರಸ್ತೆ

# ಒಂದೇ ತಪ್ಪಿನಿಂದ

ಸಂತಾಪಕೆ ಕಡಿವಾಣ ಹಾಕಿರಿ, ಬಿಗಿಯಿರಿ ಬಾಯಿಗೆ ಬೀಗ
ಒಂದೇ ತಪ್ಪಿನಿಂದ ನನಗೆ, ಸಂತಸ ಕಳಕೊಳ್ಳಬೇಕಾಯಿತು

ಸಣ್ಣಪುಟ್ಟ ವಿಷಯಕ್ಕೆ ಗಮನ ನೀಡದಿರಿ
ಮಾತಿಗೆ ಮಾತು ಬೆಳೆಯುವುದು ಸೋದರರೇ ಕೇಳಿರಿ
ಹಣದ ತಾಕತ್ತನ್ನು ನೀವು ತೋರಬೇಡಿರಿ
ಪೊಲೀಸರ ಹೆಸರೆತ್ತಿದರೆ ಸಾಕು, ಹೆದರಿ ಬೆವರುತ್ತೀರಿ

ಹೊಸಹೊಸತು ನಿತ್ಯ ಘಟಿಸುತ್ತವೆ ಈ ಜಗತ್ತಿನಲಿ
ಕಣ್ಣು, ಕಿವಿಯಿದ್ದರೂ ....ಕುರಡ, ಕಿವುಡರಾಗುತ್ತಾರೆ
ಐಕ್ಯತೆಯಿಲ್ಲದೆ ಇಬ್ಬರೂ ಕವಲುದಾರಿ ಹಿಡಿಯುತ್ತಾರೆ
ಸಂತಾಪದ ಭರದಲಿ ಏನೇನೋ ಇತಿಹಾಸ ಘಟಿಸುತ್ತದೆ.

ಸಂತಾಪದ ಭರದಲಿ ಘಟನಾಸ್ಥಳದಲಿ ನಿಲ್ಲಬೇಡಿ
ನಿಂತಿರೋ ಎದುರಿಸಬೇಕಾಗುತ್ತದೆ ಗಂಡಾಂತರ ಗಡಿಬಿಡಿ
ಪ್ರಕಾಶ ಪಂಡಿತನ ಮಾತನ್ನು ತುಸು ನೀವು ಆಲಿಸಿರಿ
ಸಂತಾಪ ಓಡಿಸುವ ಅವಕಾಶ ಕಳೆದುಕೊಳ್ಳಬೇಡಿರಿ
ಊರಲ್ಲೆಲ್ಲ ಮನೆ ಮಾತಾಯಿತು
ಒಂದೇ ತಪ್ಪಿನಿಂದ ನನಗೆ ಸಂತಸ ಕಳಕೊಳ್ಳಬೇಕಾಯಿತು.

- ಪ್ರಕಾಶ ತುಳಶಿರಾಮ ಪಂಡಿತ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಜೀವನದ ಅರ್ಥ

ಜೈಲಿನ ಕತ್ತಲೆಯೊಳಗೆ ಜೀವನದ ಅರ್ಥ ಅರಿತೆ....
ಕುಟುಂಬದ ಸಂತಸವನು, ಕ್ಷಣಾರ್ಧದಲಿ ಮರೆತೆ....

ಹಣದ ಮಹಿಮೆ ನಾನರಿತೆ ಈಗ
ಅನ್ನದ ಬೆಲೆ ನಾನರಿತೆ ಈಗ
ಬದುಕಿನ ಮೌಲ್ಯವನೂ ನಾನರಿತೆ ಈಗ
ಸ್ವಾರ್ಥಿ ಬಂಧುಬಳಗ ಲಾಭ ಪಡೆವರು, ಹಣದೋಚುವ
ವಿಶ್ವಾಸ ಗುನ್ನೆಯ ಕಲಂಕಿತ ಉಡುಗೊರೆ ನೀಡಿದರು ನನಗೆ
ಶಿಕ್ಷೆಗೊಳಗಾದ ದುಃಖ ನನಗಿಲ್ಲ
ಆಯುಷ್ಯ ಹಾಳಾದ ದುಃಖ ನನಗಿಲ್ಲ
ದುಃಖ ನನಗಿದೆ, ತಾಯಿ ತಂದೆಗಳದ್ದು....
ಅವರನ್ನು ಸುಖವಾಗಿ ಇಡಲಾಗದೇ ಇದ್ದದ್ದು
ನನ್ನ ಘಟನೆ ಕೇಳಿ, ಇಡೀ ಊರು ಹಳಹಳಿಸಿತು....

ಜೈಲಿನಲ್ಲಿವೆ ಭಿನ್ನ ಭಿನ್ನ ವಿಭಾಗ
ಅದರಿಂದ ದೊರಕುತ್ತದೆ ನಮಗೆ ಶಿಕ್ಷಣ-ಉದ್ಯೋಗ
ಶಿಕ್ಷಣ ಪಡೆದ ಬಳಿಕ ನಮ್ಮದಾಯಿತು ಪುನರ್‌ವಸತಿ
ಸರಕಾರ ಹೆಸರಿಟ್ಟಿತು ಸುಧಾರಣೆ ಪುನರ್‌ವಸತಿ
ಪ್ರಕಾಶ ಪಂಡಿತನನ್ನು ಕಂಡೊಡನೆ ವೈರಿ ಮನದೊಳಗೆಯೆ ಉರಿದ
ಜೈಲಿನ ಕತ್ತಲೆಯೊಳಗೆ ಜೀವನದ ಅರ್ಥ ಅರಿತೆ

- ಪ್ರಕಾಶ ತುಳಶಿರಾಮ ಪಂಡಿತ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಜೈಲಿನ ಪತ್ರ

ನಗತದ
ಅಳತದ
ಸಿಟ್ಟಾಗತದ
ಹತಾಶವಾಗತದ
ಬೆದರತದ
ಶಬ್ದಗಳ ಭಾರ ಹೊರತದ
ಏನೇನೋ ಭಾಳ ಹೇಳತಿರತದ
ಜೈಲಿನ ಪತ್ರ,
ಪಶ್ಚಾತ್ತಾಪದ ಬೆಂಕೀಲಿ ಸುಟ್ಟಕೊಳ್ಳತದ
ಆಪ್ತರ ನೆನಪಿಂದ...
ಪತ್ರ...ಕಣ್ಣೀರೂ ಸುರಿಸತದ
ಜೈಲಿನ ಪತ್ರ
ಮೈಮರಿತದ
ಆವೇಗದಿಂದ ಕೂಡಿರತದ
ಬದನಾಮಿನ ಆದಮ್ಯಾಲ ಇನ್ಯಾಕ
ಪತ್ರ...ಸೇಡಿನ ಭಾಷಾನೂ ಮಾತಾಡತದ...
ಜೈಲಿನ ಪತ್ರ !
ಹೆಂಡತಿ ವಿರಹದಿಂದ ವ್ಯಾಕುಲಗೊಳ್ಳತದ
ಶಬ್ದಗಳ ಹೂವಿನ ಹಾಸಿಗೆಯನೂ ಹಾಸತದ
ಮತ್ತ...ಪ್ರೇಯಸಿಯ ನೆನಪಿಂದ
ರೋಮ ರೋಮ ನಿಮಿರತದ...ಪತ್ರ...
ಇಟಗೊಂಡ ರಂಡೀ ಮ್ಯಾಲ ಅವಿಶ್ವಾಸ ಇಡತದ
"ಬಾಹರ ಆಯಾ ತೋ ರಾಡಾ ಕರ್ ಡಾಲೂಂಗಾ"
ಅಂತಾನು ಪತ್ರ ಧಮಕಿಕೊಡತದ
ಜೈಲಿನ ಪತ್ರ !
ದಸರಾ ಹಬ್ಬದೊಳಗ ಬನ್ನಿ ಬಂಗಾರ ಹಂಚತದ
ದೀವಳಗಿ ದೀಪಗಳಿಂದ ಅಲಂಕಾರಗೊಳ್ಳತದ
ಭಾವ ಬಿದಿಗಿ ದಿನ

ಅಕ್ಕತಂಗೇರ ನೆನಪಾಗಿ ಹತಾಶವಾಗತದ
ಮತ್ತ...ಕಣ್ಣೀರ ಉಡುಗೊರೆ ಕೊಡತದ
ಜೈಲಿನ ಪತ್ರ ಅಳತಾನ ಇರತದ

ಜೈಲಿನ ಪತ್ರ
ಜಾಮೀನ ಏನಾತು? ಅಂತ ಕೇಳತದ
ಜಮೀನದಾಗ ಏನು ಬಿತ್ತೀರಿ? ಅಂತಾನೂ ವಿಚಾರಿಸತದ
" ಸಾಲೆ ಕೋ ಟಪಕಾ ಕೇ ಜಮೀನ ಮೇ ಗಾಡ ಡಾಲೋ"
ಅಂತ ಕಾಗದ ತಮ್ಮ ಪಂಟರರಿಗಿ ಗೇಮನ್ನೂ ಹೇಳಿಕೊಡತದ

ಜೈಲಿನ ಪತ್ರ !
ಅಹಿಂಸೆಯ ಭಾಳ ದೊಡ್ಡಮಾತು ಹೇಳತದ
ಹಿಂಸೇನೂ ಸಮರ್ಥಿಸತದ
"ದುನಿಯಾ ಗಯಿ ಭಾಡ್ ಮೇ " ಅನ್ನುತ್ತ
ಪತ್ರ ಬಂಡಾಯದ ದೀವಟಗಿಯನ್ನೂ ಉರಿಸತದ
ಶಬ್ದಗಳ ಭಾರ ಹೊರತದ, ಜೈಲಿನ
ಪತ್ರ ಏನೇನೋ ಭಾಳ ಹೇಳತಿರತದ...

ಜೈಲಿನ ಪತ್ರ!
ತತ್ವಜ್ಞಾನ ಬೋಧಿಸತದ
ಅಧ್ಯಾತ್ಮ ಬೊಗಳತದ,
ಒಟ್ಟು ಧರ್ಮಗಳ ಪ್ರತಿಮೆಗಳಿಂದಲೂ ಸಿಂಗಾರಗೊಂಡಿರತದ
ಮತ್ತ ಎಲ್ಲ ದೇವರು ಧರ್ಮವನ್ನ ಗುಡಿಸಿ
ಸೊಂಟದ ಕೆಳಗಿಡತದ

ಜೈಲಿನ ಪತ್ರ !
ಶಾಂತಿಯ ಮಹತ್ವ ತಿಳಕೊಂಡದ
ಕ್ರಾಂತಿಯ ಭಾಷಾಕಾರಿಕೊಳ್ಳತದ
"ಮಜಬೂರಿ ಕಾ ನಾಮ ಮಹಾತ್ಮಾ ಗಾಂಧಿ" ಅಂತನ್ನತದ
ಒಮ್ಮೊಮ್ಮೆ ಪತ್ರ ವಾಂತೀನೂ ಮಾಡಿಕೊಳ್ಳತದ

ಜೈಲಿನ ಪತ್ರ !
ಪತ್ರ ಕಂಡೊಡನೆಯೆ ಪತ್ರ ಕೊಡ್ರಿ
ಅಂತಂದು ಬಂಧು ಬಳಗಕ್ಕ ಬೇಡಿಕೊಳ್ಳತದ
ಆಸೆ ನಿರಾಸೆಗಳ ಒತ್ತಡಗಳನ್ನ ನೆಯ್‌ತಿರತದ...
ಜೈಲು ಕೋಣೆ ಕಬ್ಬಿಣದ ಬಾಗಿಲಲ್ಲಿ ಕೂತು
ಮನೆಮಠ ಕಳಕೊಂಡ ವೇದನೆಯಿಂದ
ಪತ್ರ ಮನೀನೂ ಜ್ಞಾಪಿಸತದ
ಶಬ್ದಗಳ ಭಾರ ಹೊರತದ,
ಜೈಲಿನ ಪತ್ರ
ಏನೇನೋ ಭಾಳ ಹೇಳತಿರತದ
ಜೀವಂತ ಆಗಿರೋರನ್ನ ನಿರ್ಜೀವಗೊಳಿಸೋ ವಸತಿಯೊಳಗಿನ
ನಿರ್ಜೀವ ಪತ್ರ ಸಜೀವಗೊಳ್ಳತಾನೂ ಇರತದ
ಶಬ್ದಗಳ ಭಾರ ಹೊರತದ, ಏನೇನೋ ಭಾಳ ಹೇಳತಿರತದ

- ಶಿವಾಜಿ ವೇಡೂ ಸಾಳುಂಕೆ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಸ್ಟೈರನ್...ಜೈಲಿನದು...

ಅಪಾಯದ ಸ್ಟೈರನ್ ಕೂಗಿದಾಗ
ಸಾನೆ ಗುರೂಜಿ ಹಾಲ್‌ನಲಿ ಪಾಂಡುರಂಗ ಸಾನೆ ಬೆದರುತ್ತಾನೆ
ವಿಪಶ್ಯನೆಯ ಧಮ್ಮಪಟಿಯಲಿ ಸಿದ್ಧಾರ್ಥ ಗೌತಮ ನಡುಗುತ್ತಾನೆ !
ಚೌಕದೊಳಗಿನ ಮೋಹನಚಂದ ಮೌನ ಕಂಬನಿ ಹರಿಸುತಿರುತ್ತಾನೆ...
ಮೊನ್ನೆ... ಮೂವರು ನನಗೆ ಗೋಡೆ ಹತ್ತಿರ ಸಿಕ್ಕರು
ಮತ್ತೇನ್ರಿ, ವಿಶೇಷ ! ಸಹಜ ನಾನಂದೆ.
ಕ್ಷಣಹೊತ್ತು ನಿಂತರು,
ಬಿಕ್ಕಿ ಬಿಕ್ಕಿ ಅತ್ತರು.
ಗಂಟಲಿನ ಬಿಕ್ಕು ಹತ್ತಿಕ್ಕುತ್ತ
ನಮಗಿಲ್ಲಿಂದ ಹೋಗುವುದಿದೆ ಎಂದರು,
ಪರೋಲ, ಫುರ್ಲೊ ಮೇಲೆ ರಜಾ ಹಾಕಿದಿರೇನು?
ಎಂದು ಮೂವರಿಗೂ ಕೇಳಿದೆ
ಪಾಂಡುರಂಗ
ಸಿದ್ಧಾರ್ಥ
ಮೋಹನ - ಒಂದೇ ಮಾತಲ್ಲಿ ನಿರಾಕರಿಸಿದರು.
ಸಹಜ ರಜೆ ಚೀಟಿ ಅವರಿಗೆ ನೀಡುತ್ತ ಕೇಳಿದೆ
ಯಾರ ಹೆಸರನ್ನು ಸದರಿ ಜಾಮೀನದಾರೆಂದು ಬರೆದರು?
ಚೀಟಿ ತಗೊಂಡರು,
ಹೆಸರು ಓದಿದರು....ವಿಷ್ಣು ವಾಮನ ಶಿರವಾಡಕರ
ಕಂಠ ಬಿಗಿಯಿತು
ಕಣ್ಣು ತೇವಗೊಂಡಿತು
ಎದೆಯೊಳಗಿನ ಬಿಕ್ಕನ್ನು ಅದುಮುತ್ತ
ಅವರಿಗೆ 'ತಾತ್ಯಾ' ದೇವರಮನೆ ಸೇರಿದ್ದನ್ನು ಹೇಳಿದೆ.

ಪಾಂಡುರಂಗ,
ಸಿದ್ಧಾರ್ಥ
ಮೋಹನ

ಸುದ್ದಿ ಕೇಳಿ ದಂಗಾದರು
ಕೈದಿ ಕೋಣೆ ಮೆಟ್ಟಿಲು ಮೇಲೆ ಕುಳಿತು
ಮೂವರು ಬಿಕ್ಕಿ ಬಿಕ್ಕಿ ಅತ್ತರು
ಅಪಾಯದ ಸೈರನ್ ಕೂಗಿದಾಗ
ಮೂವರು ನನಗೆ ಜೈಲಲ್ಲಿ ಸಿಕ್ಕರು...

- ಶಿವಾಜಿ ಸಾಳುಂಕೆ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

---

*ಸಾನೆಗುರೂಜಿ (ಪಾಂಡುರಂಗ ಸದಾಶಿವ ಸಾನೆ): ಮಹಾರಾಷ್ಟ್ರದ ಬಹುದೊಡ್ಡ ಸಮಾಜ ಸೇವಕ, ಪ್ರಸಿದ್ಧ ಸಾಹಿತಿ ಹಾಗೂ ಅಂತರ ಭಾರತಿ ಕಲ್ಪನೆಯ ಸಾಕಾರಮೂರ್ತಿ.

*ವಿಷ್ಣು ವಾಮನ ಶಿರವಾಡಕರ (ಕುಸುಮಾಗ್ರಜ): ಮರಾಠಿಯ ಜ್ಞಾನ ಪೀಠ ಪ್ರಶಸ್ತಿ ವಿಜೇತ ಪ್ರಸಿದ್ಧ ಕವಿ ಹಾಗೂ ಮಹಾ ಮಾನವತಾವಾದಿ ಎಂದು ಜನಮನ್ನಣೆ ಗಳಿಸಿದ ಈ ಕವಿಯನ್ನು ಜನ ಪ್ರೀತಿಯಿಂದ 'ತಾತ್ಯಾ' ಎಂದು ಸಂಬೋಧಿಸುತ್ತಿದ್ದರು.

# ನಾವಿಲ್ಲಿ

ಕತ್ತಲೆ ಸಂಗ ಗೆಳೆತನ ನಮ್ಮದು ಇಲ್ಲಿ
ಮತ್ತೆ ಕತ್ತಲೆಯ ತಡೆಗೋಡೆಗಳಿರುತ್ತವೆ !
ಜೈಲುಕೋಣೆಯ ಬೆಳಕಿಂಡಿಯಿಂದ
ಒಮ್ಮೊಮ್ಮೆ ಇಲ್ಲಿ ಬೆಳಕಿನ ಮರಿಗಳು ಆಡುತ್ತವೆ!
ನಮ್ಮ ವೇದನೆ ಜರತಾರಿ
ವ್ಯಥೆಗಳು ಜಬರದಸ್ತಾಗಿರುತ್ತವೆ!
ಕಣ್ಣಿಂದ ಹರಿದ ಬಿಸಿ ನೀರೂ ಸಹ
ನಮ್ಮ ರೆಪ್ಪೆಗಳ ಮರೆಯಲ್ಲಿ ಕೂತು ನಗುತ್ತದೆ!
ಕಾಲದ ಕ್ರೂರ ಪ್ರಹಾರ ತಾಳಲು
ಮನಸ್ಸು ಇಲ್ಲಿ ಹದಗೊಳ್ಳುತ್ತದೆ!
ಯಾರದೋ ನವಿರಾದ ನೆನಪಿನಿಂದ
ಹೃದಯ ಮೊಲದಂತೆ ಮುದುಡಿ ಕಂಪಿಸುತ್ತದೆ!

ನಾವೆಂಥ ದರಿದ್ರರೆಂದರೆ, ಬಾಜಾರದಲ್ಲಿ ಮರ್ಯಾದೆಯಿಲ್ಲ
ಪಾಲಿಗೆ ಬಂದದ್ದು ಸೋಲೆ, ಗೆಲ್ಲುವ ಹಠವಿಲ್ಲ!
ಚಂದಿರ ಕಳುವಾಗದ ರಾತ್ರಿಗಳೇ ಇಲ್ಲಿಲ್ಲ
ಚುಕ್ಕಿಗಳದೇನು ಬಿಡು ಚಂದಿರನಿಗೂ ಉಳಿಗಾಲವಿಲ್ಲ !
ಇದೆಂಥ ಕ್ಷುದ್ರ ಆಯುಷ್ಯವೆಂದರೆ, ಅಸ್ಮಿತೆಯ ಮಾತೇ ಇಲ್ಲ
ಯಾರ ಮೇಲಾದರು ಸೆಟಗೊಳ್ಳಬೇಕೆಂದರೆ, ಅಂಥ ಸಂಗಾತಿನೆ ಇಲ್ಲ !
ಕಲಮು ಮಾಡಿದ ದೇಹದಿಂದ ಅಂಕುರಗೊಳ್ಳುವ ಜೀವವಿಲ್ಲ
ಎಂದಾದರು ಕೈಯಾಡಿಸುವಂಥ ಭಾವಾವೇಶ ಈಗಿಲ್ಲ !
ಇಂಥ ಕೈಫಿಯತ್ತಿನ ಅನಾಥ ಗೆಳೆಯನೆ, ಇದು ರುಜುವಾತು ಅಲ್ಲ
ಕತ್ತಲೆಯನು ಭೇದಿಸುವಂಥ ಮಾತೀಗ ಇಲ್ಲವೇ ಇಲ್ಲ !

ಈಗಲೂ ಎಲ್ಲೋ ಅನಿಸುತಿದೆ, ಇದು ನಿನ್ನ ಮೋಸವಲ್ಲ
ಇಂದು ಮನದುಂಬಿ ಬದುಕಿಬಿಡು, ನಾಳೆಯ ಭರವಸೆಯಿಲ್ಲ !

-ಶಿವಾಜಿ ಸಾಳುಂಕೆ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಹೋಲಿಕೆ

ನಾನ್ಯಾರು ಯಾರ ಪೈಕಿ
ಹೇಗೆ ಬಂದೆ ಇಲ್ಲಿ

ತಪ್ಪು ಮಾರ್ಗ ಹಿಡಿದೆ
ನಾ ಹೇಗೆ ಸುಧಾರಿಸಲಿ

ಕನಸು ಕನಸು ನನ್ನವು
ಕಲ್ಪನೆಯಲ್ಲಿ ಕಾಲ ಕಳೆದೆ.

ಭೂತಕಾಲದ ಬದುಕಿನ ಭಾರವನ್ನು
ನನ್ನ ಮನದ ಮರ್ಮವನ್ನು ಯಾರೂ ಅರಿಯಲೇ ಇಲ್ಲ

ರೋಷ ಉಕ್ಕುತ್ತದೆ ಎಲ್ಲೆಲ್ಲೂ
ಯಾಕೆ? ಎಂಬ ವಿಚಾರವನ್ನು ಯಾರೂ ಮಾಡಲೇ ಇಲ್ಲ

ನಾನಾಗಿದ್ದೇನೆ ಹೀಗೆ ದುರ್ದೈವಿ
ಅಪರಾಧಿಯ ಹೋಲಿಕೆ ಕೊಟ್ಟರು ಯಾರ್‍ಯಾರೋ

ಕಣ್ಣಿಂದ ಕಂಡದ್ದನ್ನೇ ನೀವು ನೋಡಿದಿರಿ
ಬೆನ್ನ ಹಿಂದಿನ ಇತಿಹಾಸ ಅರಿಯಲೇ ಇಲ್ಲ !

ನನ್ನ ಮನಸ್ಸು ಕೋಮಲ
ನೀವೆಂದೂ ಗಮನಿಸಲೇ ಇಲ್ಲ

ಮಾಡುವವನು, ಮಾಡಿಸುವವನು ಅವನೇ
ಅಂದ ಮೇಲೆ ನಾನ್ಯಾರು ?

ಆತ ಮನುಷ್ಯನೆಂಬ ಅವನ ನಿಂದೆ ಯಾತಕ್ಕೆ ?

- ದಿನೇಶ ಮೋಹನ ಪವಾರ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ಪ್ರೀತಿ

ಗಾಳಿಗೆ ಕೇಶರಾಶಿಯ ಚೆಲ್ಲಬೇಡವೆ
ಅವು ಬುರಬುರನೆ ಹಾರಾಡುತ್ತವೆ

ನಿನ್ನನ್ನು ಅಪ್ಪಿಕೊಳ್ಳಲು
ಅವು ನನ್ನಲಿ ಕೋರುತ್ತವೆ
ನೀ ಲಜ್ಜೆಪಡಬೇಡ
ತುಟಿಯ ಪಕಳೆಗಳು,
ಸೆರಗಿನ ಮರೆಯಲಿ ಕರಗಿ ಹೋಗುತ್ತವೆ
ನವಿರಾಗಿ ಚುಂಬಿಸುವಂತೆ
ನನಗವು ಸೂಚಿಸುತ್ತವೆ.

ಹಕ್ಕಿಗಳೆರಡು
ಬಾನಿನಲ್ಲಿ ಹೇಗೆ ವಿಹರಿಸುತ್ತವೆ ನೋಡು,
ನನ್ನ ನಿನ್ನ ಪ್ರೀತಿಯ ಕುರಿತು
ಜಗತ್ತಿಗೆ ಅವು ಸಾರುತ್ತವೆ ನೋಡು
ನಿನ್ನದೇ ಕನಸುಗಳು ನನಗೆ
ನಿತ್ಯ ಬೀಳುತ್ತವೆ,
ನೀ ನನ್ನವಳೇ
ಎಂದು ನನಗವು ಹೇಳುತ್ತವೆ.

- ದಿನೇಶ ಮೋಹನ ಪವಾರ
ಮಧ್ಯವರ್ತಿ ಕಾರಾಗೃಹ, ಔರಂಗಾಬಾದ

# ರಕ್ಷಾ ಬಂಧನ

ಬಂತು ಬಂತು ರಕ್ಷಾ ಬಂಧನದ ದಿನ
ಕಣ್ಣೆದುರಿಗಿಲ್ಲ ತಂಗಿ
ನಾನೀಗ ಜೈಲಲಿ ಕೈದು
ಆದರೂ ಮನದೊಳಗೆ ಕಾಡುವುದು ನೆನಪು.

ನನ್ನ ತಂಗಿಯ ವಾತ್ಸಲ್ಯ
ಈ ಸಾಗರಕ್ಕಿಂತಲೂ ಆಳ
ಇಂದಿನ ಈ ಶುಭ ಗಳಿಗೆಯಲ್ಲೂ
ರೋದಿಸುತ್ತಿರಬಹುದು ಆ ತಂಗಿ

ನನ್ನ ತಂಗಿಯ ಆಸೆಗಳನ್ನ
ಯಾರು ಈಡೇರಿಸಿಯಾರು,
ಅವಳ ಕೋಗಿಲೆ ದನಿ
ಯಾರು ಕೇಳಿಯಾರು

ನನ್ನ ಮಮತೆಯ ತಂಗಿಗೆ ಯಾರು
ಕೊಟ್ಟಾರು ಸ್ವಾಮಿ ಉಡುಗೊರೆಯನ್ನ
ರೋದಿಸುತ್ತಿದೆ ನನ್ನ ಮನ

ನನಗಿರುವವಳು ಒಬ್ಬಳೇ ತಂಗಿ·
ಅವಳ ಸಂಕಟಕೆ ಯಾರಿಲ್ಲ ಸಂಗಾತಿ
ನನ್ನ ಭಗಿನಿಯ ವ್ಯಥೆಯ ಹೇಳಲಿ ಯಾರ ಮುಂದೆ
ಅವಳ ಎಲ್ಲ ಚಿಂತೆಯನು ಪಾಂಡುರಂಗನೇ ಬಲ್ಲ

ತಂಗಿ, ಹೆದರಬೇಡ ಈ ದುಃಖಕೆ
ಇರುವುದು ನನ್ನಾಶೀರ್ವಾದ ಸದಾ ನಿನ್ನ ಬೆನ್ನಿಗೆ
ಬಂತು ಬಂತು ನೋಡು ರಕ್ಷಾಬಂಧನ ದಿನ
ಎಂಥ ದುರ್ದೈವಿ ನಾ ಕಣ್ಣೆದುರಿಗಿಲ್ಲ ತಂಗಿ ಈ ದಿನ

- ಪರಶುರಾಮ ಉಮಾ ಮೆರಂಡೆ
ಮಧ್ಯವರ್ತಿ ಕಾರಾಗೃಹ, ನಾಸಿಕ ರಸ್ತೆ

# ಜೀವನ ಗಾಥೆ

ನನ್ನ ಬಾಲ್ಯದ ಕತೆ
ನಿಮಗೆಂತು ಹೇಳಲಿ?
ಮೊಲೆಗೂಸು ನಾ ಬೆಳೆಯುತ್ತಿದ್ದೆ ತಾಯ ಮಡಿಲಲಿ
ಬೆರಳು ಚೀಪುತಿದ್ದೆ ಬಾಯಲ್ಲಿಟ್ಟು
ಮೂರ್‍ನಾಲ್ಕು ವರುಷದ ಆ ಎಳೆ ವಯಸ್ಸಲಿ
ಆಡುತ- ನೆಗೆದಾಡುತ ನಾ ಮೈಮರೆತೆ ಗೋಲಿಯಾಟದಲಿ
ಅವ್ವ- ಅಪ್ಪನ ಮನದಲ್ಲಿ ಏನೋ ಬಂತು?
ನನ್ನನು ಒಯ್ದು ಅಟ್ಟಿದರು ಶಾಲೆಗೆ
ಆಗ ಕಲಿಯುತ ಕಲಿಯುತ
ನನಗೆಂಟಿತು ಕುಸಂಗತಿ,
ಓದು ಮುಗಿಸಿ ದುಡಿಮೆಗೆ ಹೊರಟೆ
ಮದುವೆಯೂ ಆಯಿತು, ಆದರೂ ಹಾಳಾದೆ
ಆಗಲಿಲ್ಲ ನನಗೆ ಸುಖವಾಗಿಡಲು ನನ್ನ ಕುಟುಂಬ
ಹುಚ್ಚುಚ್ಚಾಗಿ ವರ್ತಿಸಿದೆ, ಭವಿಷ್ಯದ ಚಿಂತೆ ಮಾಡಲೇ ಇಲ್ಲ
ಅಜ್ಞಾನದ ಭರದಲಿ, ನಾ ಸೇರಿದೆ ಜೈಲನು
ಭ್ರಮೆ ಕಳಚಿ ದೂರಾಯಿತು, ಬೆಳಕು ಮೂಡಿತು ಮಸ್ತಕದಲಿ

- ಪರಶುರಾಮ ಉಮಾ ಮೆರಂದೆ
ಮಧ್ಯವರ್ತಿ ಕಾರಾಗೃಹ, ನಾಶಿಕ ರಸ್ತೆ

## ಡಿ. ಎಸ್. ಚೌಗಲೆಯವರ ಕೃತಿಗಳು

'ಗಾಂಧಿ ವಿರುದ್ಧ ಗಾಂಧಿ' - ನಾಟಕ- 1998
(ಮೂಲ : ಅಜಿತ ದಳವಿ)

2. 'ಬಿ. ಕೆ. ಹುಬಳಿ' - ಕಲಾವಿದರ ಬದುಕು - ಕಲೆ - 1999
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಇವರ ಪ್ರಕಟಣೆ.

3. 'ವಾರಸಾ' - ಕಥಾ ಸಂಕಲನ - 2000

4. ' ನಿನ್ನ ಮೇಲೆ ಸಿಟ್ಟಿಲ್ಲ ಮಾಯೀ' - ಕಥಾ ಸಂಕಲನ-2001
(ಮರಾಠಿ ಕತೆಗಳ ಅನುವಾದ)

5. ' ಬಣ್ಣ ಬಯಲು' - 2002
(ಚಿತ್ರಕಲೆ ಲೇಖನಗಳ ಸಂಕಲನ)

6. ' ಕನ್ನಡ ಸ್ವಯಂ ಬೋಧಿನಿ' - 2003
(ಮೂಲ : ಲಿಂಗದೇವರು ಹಳೇಮನೆ)
ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ಪ್ರಕಟಣೆ

7. 'ಪೇಯಿಂಗ್ ಗೆಸ್ಟ್' - ನಾಟಕ - 2003
(ಮೂಲ : ಅಭಿರಾಮ ಭಡಕಮ್‌ಕರ್)

8. 'ನೆರಳುಗಳು' - ಕಾದಂಬರಿ - 2004
(ಮೂಲ : ಜಯವಂತ ದಳವಿ)

9. 'ಒಡಲ ಉರಿಯ ಹೊತ್ತು' - ಕಥಾ ಸಂಕಲನ - 2004

10. ' ಮರಾಠಿ ಕೈದಿಗಳ ಕವಿತೆಗಳು' - ಕವನ ಸಂಕಲನ - 2004
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರ ಪ್ರಕಟಣೆ

# ಪುರಸ್ಕಾರಗಳು

'ಗಾಂಧಿ ವಿರುದ್ಧ ಗಾಂಧಿ ' ಕೃತಿಗೆ

1. ಗೊರೂರು ಸಾಹಿತ್ಯ ಪ್ರಶಸ್ತಿ - 1998

2. ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ - 1999

'ವಾರಸಾ' ಕಥಾ ಸಂಕಲನಕ್ಕೆ

3. ಅತ್ತಿಮಬ್ಬೆ ಪ್ರತಿಷ್ಠಾನದ 'ರನ್ನ ಸಾಹಿತ್ಯ ಪ್ರಶಸ್ತಿ' - 2001

ಇತರೆ

4. ' ವಾರಸಾ ' ಕತೆಗೆ ಚೆನ್ನೈ ಕನ್ನಡ ಬಳಗದ ' ಲಹರಿ ' ಬಹುಮಾನ - 2000

5. ' ಮಾಯೆಯೋ ಮಾನವನೋ' ( ಸ್ಥಿತ್ಯಂತರ ) ಕತೆಗೆ ತುಷಾರ ಎಚ್. ಎಮ್. ಟಿ ಅತ್ಯುತ್ತಮ ಕಥಾಬಹುಮಾನ - 2001

6. ಚಿತ್ರಕಲೆಗೆ ವಿಶ್ವೇಶ್ವರಯ್ಯ ಪುರಸ್ಕಾರ - 2001

7. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ 'ಆನಂದಕಂದ' ಪ್ರಶಸ್ತಿ - 2004 (ಕನ್ನಡ - ಮರಾಠಿ ಭಾಷಾ ಬಾಂಧವ್ಯಕ್ಕೆ)